
## ದ್ವಿತೀಯ ಪಿಯುಸಿ

# ರಾಜ್ಯಶಾಸ್ತ್ರ



## ಪರೀಕ್ಷಾ ಕೈಪಿಡಿ


**ಲೇಖಕರು**

**ಜಿ.ಆರ್.ಕೇಶವಮೂರ್ತಿ ಎಂ.ಎ. ಎಂ.ಫಿಲ್., ಬಿ.ಎಡ್.**

ರಾಜ್ಯಶಾಸ್ತ್ರ ಉಪನ್ಯಾಸಕರು

ಸರ್ಕಾರಿ ಪದವಿಪೂರ್ವ ಕಾಲೇಜು

ದೊಡ್ಡಬಳ್ಳಾಪುರ.



**UK PUBLICATION**

**#284, Singapura Layout, Near Kanakabhavana,**
**Bengaluru.**


**M.R.P. Rs. 20/-**
(Inclulive of all taxes)

## ದ್ವಿತೀಯ ಪಿಯುಸಿ

# ರಾಜ್ಯಶಾಸ್ತ್ರ

## ಪರೀಕ್ಷಾ ಕೈಪಿಡಿ

**I . ಒಂದು ಅಂಕದ ಪ್ರಶ್ನೆಗಳು**
**(ಕೆಳಕಂಡ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿ)**

**1. ಭಾರತ ಯಾವಾಗ ಸ್ವಾತಂತ್ರ್ಯ ಪಡೆಯಿತು?**
15 ಆಗಸ್ಟ್ 1947.

**2. "ಭಾರತೀಯ ರಾಷ್ಟ್ರೀಯ ಕಾಂಗ್ರೆಸ್" ಯಾವಾಗ ಉದಯಿಸಿತು?**
1885

**3. ಭಾರತದಲ್ಲಿ ಮಧ್ಯಂತರ ಸರ್ಕಾರ ಯಾವಾಗ ರಚನೆಯಾಯಿತು?**
2 ಸೆಪ್ಟಂಬರ್ 1946.

**4. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಯಾವಾಗ ಸ್ಥಾಪನೆಯಾಯಿತು?**
1994 ರಲ್ಲಿ.

**5. 2013 ರಲ್ಲಿ ಯಾವ ರಾಜ್ಯವನ್ನು ವಿಭಜಿಸಲಾಯಿತು?**
ಆಂದ್ರಪ್ರದೇಶ.(ಹೊಸ ರಾಜ್ಯ ತೆಲಂಗಣ)

**6. ಭಾರತದಲ್ಲಿ 'ಉದಾರೀಕರಣ'ವು ಯಾವಾಗ ಪ್ರಾರಂಭವಾಯಿತು?**
1991

**7. ಭಾರತದ ಸಂವಿಧಾನ ಯಾವಾಗ ಅಸ್ತಿತ್ವಕ್ಕೆ ಬಂದಿತು?**
26 ಜನವರಿ 1950.

**8. ರಾಜ್ಯಗಳ ಪುನರ್ ರಚನಾ ಆಯೋಗ ಯಾವಾಗ ರಚನೆಯಾಯಿತು?**
1953 ರಲ್ಲಿ.

**9. ಕೌಟುಂಬಿಕ ದೌರ್ಜನ್ಯ ಕಾಯ್ದೆ ಯಾವಾಗ ಜಾರಿಗೆ ಬಂದಿತು?**
2005 ರಲ್ಲಿ.

**10. "ಪಕ್ಷಾಂತರ ನಿಷೇಧ ಕಾಯ್ದೆ" ಯಾವಾಗ ಜಾರಿಗೆ ಬಂದಿತು?**
1 ಏಪ್ರಿಲ್ 1985.

**11. ಯಾವಾಗ ದಕ್ಷಿಣ ಆಫ್ರಿಕಾ ಬ್ರಿಕ್ಸ್‌ನ ಸದಸ್ಯ ರಾಷ್ಟ್ರವಾಯಿತು?**
2010 ರಲ್ಲಿ.

**12. "ವಿಶ್ವಪರಿಸರ ದಿನ" ವೆಂದು ಆಚರಿಸುವುದು ಯಾವಾಗ?**
ಜೂನ್– 5.

**13. ಯಾವ ದಿನವನ್ನು" ಕಾರ್ಮಿಕರ ದಿನವನ್ನಾಗಿ ಆಚರಿಸಲಾಗುತ್ತದೆ?**
ಮೇ – 1

**14. ಯಾವ ದಿನವನ್ನು "ಮತದಾರರ ದಿನ"ವನ್ನಾಗಿ ಆಚರಿಸಲಾಗುತ್ತಿದೆ?**
ಜನವರಿ–25

**15. NOTA ವನ್ನು ವಿಸ್ತರಿಸಿ.**
ಮೇಲಿನದು ಯಾರೂ ನನ್ನ ಆಯ್ಕೆಯಲ್ಲ. (Non Of The Above)

**16. NAM ಅನ್ನು ವಿಸ್ತರಿಸಿ.**
ಅಲಿಪ್ತ ನೀತಿ (Non-Align Movement)

**17. EPIC ನ್ನು ವಿಸ್ತರಿಸಿ.**
ಮತದಾರರ ಗುರ್ತಿನ ಚೀಟಿ. (Election Photo Identity Card)

**18. EVM ಅನ್ನು ವಿಸ್ತರಿಸಿ.**
ವಿದ್ಯುನ್ಮಾನ ಮತಯಂತ್ರ (Electronic Voting Mechine)

**19. NDA ಯ ವಿಸ್ತಾರ ರೂಪವೇನು?**
ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ.

**20. UPA ಯ ವಿಸ್ತಾರ ರೂಪವೇನು?**
ಸಂಯುಕ್ತ ಪ್ರಗತಿಪರ ಒಕ್ಕೂಟ

**21. WTO ಅನ್ನು ವಿಸ್ತರಿಸಿ.**
ವಿಶ್ವ ವ್ಯಾಪಾರ ಸಂಸ್ಥೆ

**22. ಭಯೋತ್ಪಾದನೆಯ ಮೂಲ ಪದ ಯಾವುದು?**
"ಟೆರರೆ"

**23. ಕೊಯಲಿಷನ್‌ನ ಮೂಲ ಪದ ಯಾವುದು?**
"ಕೊಯಲಿಷಿಯೋ"

**24. ಭ್ರಷ್ಟಾಚಾರದ ಮೂಲ ಪದ ಯಾವುದು?**
"ರಂಪಿಯರ್"

**25. ಅಖಿಲ ಭಾರತ ಸೇವೆಗೆ ಒಂದು ಉದಾಹರಣೆ ನೀಡಿ.**
IAS, IFS, IPS.

**26. ಭಾರತದಲ್ಲಿ ಎಂತಹ ಪಕ್ಷ ಪದ್ಧತಿ ಇದೆ?**
ಬಹುಪಕ್ಷಪದ್ಧತಿ.

**27. ಯಾವ ದೇಶವನ್ನು ಜಗತ್ತಿನ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರ ಎಂದು ಕರೆಯುತ್ತಾರೆ?**
ಭಾರತ.

**28. ಸಮ್ಮಿಶ್ರ ಸರ್ಕಾರದ ಅರ್ಥವೇನು?**
ಎರಡು ಅಥವಾ ಹೆಚ್ಚು ರಾಜಕೀಯ ಪಕ್ಷಗಳು ಒಗ್ಗೂಡಿ ಸರ್ಕಾರ ರಚಿಸುವುದು.

**29. "ಆಪರೇಷನ್ ಪೋಲೋ" ಎಂದರೇನು?**
ಹೈದರಾಬಾದ್‌ನ ಅರಾಜಕತೆಯನ್ನು ಅಂತ್ಯಗೊಳಿಸಲು ಮಾಡಿದ ಪೋಲೀಸ್ ಕಾರ್ಯಾಚರಣೆ.

**30. ಜಾತಿ ಆಧಾರಿತ ಅಸಮಾನತೆ ಎಂದರೇನು?**
ಜಾತಿ ಆಧಾರದ ಮೇಲೆ ತಾರತಮ್ಯ ಮಾಡುವುದು.

**31. ಲಿಂಗಾಧಾರಿತ ಅಸಮಾನತೆ ಎಂದರೇನು?**
ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡುವುದೇ ಲಿಂಗಾಧಾರಿತ ತಾರತಮ್ಯ.

**32. ವರ್ಣಭೇದ ನೀತಿ ಎಂದರೇನು?**
ಬಣ್ಣದ ಆಧಾರದ ಮೇಲೆ ತಾರತಮ್ಯ ಮಾಡುವುದು.

**33. ಡಯಾರ್ಕಿ ಎಂದರೇನು?**
ದ್ವಿ-ಸರ್ಕಾರ ಪದ್ಧತಿ.

**34. ಆರ್ಥಿಕ ಶೋಷಣೆ ಎಂದರೇನು?**
ಆರ್ಥಿಕ ಪ್ರಬಲರು ದುರ್ಬಲರ ಮೇಲೆ ಮಾಡುವ ದಬ್ಬಾಳಿಕೆಯೇ ಆರ್ಥಿಕ ಶೋಷಣೆ.

**35. ಖಾಸಗೀಕರಣ ಎಂದರೇನು?**
ಸರ್ಕಾರದ ಒಡೆತನದಲ್ಲಿರುವ ಕೈಗಾರಿಕೆಗಳನ್ನು ಖಾಸಗಿಯವರ ನಿಯಂತ್ರಣಕ್ಕೆ ನೀಡುವುದು.

**36. ಜಾಗತೀಕರಣ ಎಂದರೇನು?**
ವಿಶ್ವದ ಆರ್ಥಿಕತೆಯೊಂದಿಗೆ ರಾಷ್ಟ್ರದ ಆರ್ಥಿಕತೆಯನ್ನು ಒಂದುಗೂಡಿಸುವ ಪ್ರಕ್ರಿಯೆ.

**37. ಉದಾರೀಕರಣ ಎಂದರೇನು?**
ಆರ್ಥಿಕ ವಲಯವು ಸರ್ಕಾರದ ನಿಯಂತ್ರಣದಿಂದ ಗರಿಷ್ಠ ಪ್ರಮಾಣದಲ್ಲಿ ಮುಕ್ತವಾಗಿರುವುದು.

**38. ಪ್ರಜಾಸತ್ತಾತ್ಮಕ ಚಳುವಳಿ ಎಂದರೇನು?**
ನಿರಂಕುಶ ಪ್ರಭುತ್ವ ಮತ್ತು ಅಧಿಕಾರಯುಕ್ತ ಸರ್ಕಾರವನ್ನು ಕಿತ್ತೊಗೆದು ಪ್ರಜಾತಂತ್ರ ವ್ಯವಸ್ಥೆಯನ್ನು ಸ್ಥಾಪಿಸಲು ನಡೆಸಿದ ಆಂದೋಲನ.

**39. ಭಯೋತ್ಪಾದನೆ ಎಂದರೇನು?**
ಸಮಾಜದಲ್ಲಿ ಭಯ ಮತ್ತು ಆತಂಕದ ವಾತಾವರಣವನ್ನು ಸೃಷ್ಟಿಸುವುದು.

**40. ಚುನಾವಣೆ ಎಂದರೇನು?**
ಮತದಾರರು ತಮ್ಮ ಪ್ರತಿನಿಧಿಗಳನ್ನು ಮತದಾನದ ಮೂಲಕ ಆಯ್ಕೆ ಮಾಡುವುದು.

**41. ಖಾಸಗೀಕರಣವು ಮೊದಲು ಯಾವ ದೇಶದಲ್ಲಿ ಪ್ರಾರಂಭವಾಯಿತು?**
ಬ್ರಿಟನ್ ಮತ್ತು ಅಮೇರಿಕಾ.

**42. ಭಾರತದ ಚುನಾವಣಾ ಆಯೋಗದ ಸದಸ್ಯರನ್ನು ಯಾರು ನೇಮಿಸುತ್ತಾರೆ?**
ರಾಷ್ಟ್ರಪತಿ

**43. ರಾಷ್ಟ್ರೀಯ ತುರ್ತುಪರಿಸ್ಥಿತಿ ಸಂರ್ಭದಲ್ಲಿ ಹಣಕಾಸಿನ ಅಧಿಕಾರ ಯಾರಲ್ಲಿರುತ್ತದೆ?**
ರಾಷ್ಟ್ರಪತಿ.

**44. "ಬಂಗಬಂಧು"ಎಂದು ಯಾರನ್ನು ಕರೆಯಲಾಗಿದೆ?**
ಶೇಕ್ ಮುಜಿಬುರ್ ರೆಹಮಾನ್.

**45. ಭಾರತದ ಈಗಿನ ಮುಖ್ಯ ಚುನಾವಣಾ ಆಯುಕ್ತರು ಯಾರು?**
ಸುನಿಲ್ ಅರೋರ.

**46. "ಈ ಭೂಮಿಯಲ್ಲಿ ಪ್ರತಿಯೊಬ್ಬರ ಅಗತ್ಯತೆಗೆ ಸಾಲುವಷ್ಟು ಇದೆಯೇ ಹೊರತು, ದುರಾಸೆಗಲ್ಲ" ಎಂದು ಹೇಳಿದವರು ಯಾರು?**
ಮಹಾತ್ಮಾಗಾಂಧೀಜಿ.

**47. ಲಿಬಿಯಾದ ನಿರಂಕುಶಾಧಿಕಾರಿಯನ್ನು ಹೆಸರಿಸಿ.**
ಗಢಾಫಿ

**48. ಗಡಿರೇಖೆ ಆಯೋಗದ ಅಧ್ಯಕ್ಷರು ಯಾರು?**
ಸರ್ ಸಿರಿಲ್ ರ್‍ಯಾಡ್‌ಕ್ಲಿಪ್.

**49. "ಭಾರತದ ಉಕ್ಕಿನ ಮನುಷ್ಯ "ಎಂದು ಯಾರನ್ನು ಕರೆಯುವರು?**
ಸರ್ದಾರ್ ವಲ್ಲಭಭಾಯಿ ಪಟೇಲ್.

**50. ಭಾರತದ ವಿದೇಶಾಂಗ ನೀತಿಯ ಪಿತಾಮಹ ಯಾರು?**
ಪಂಡಿತ್ ಜವಾಹರ್‌ಲಾಲ್ ನೆಹರು.

**51. 'ಅಲಿಪ್ತ ನೀತಿ'ಯ ಪಿತಾಮಹ ಯಾರು?**
ಪಂಡಿತ್ ಜವಾಹರ್‌ಲಾಲ್ ನೆಹರು.

**52. ವೈಸ್‌ರಾಯ್‌ರವರ ಕಾರ್ಯಕಾರಿ ಮಂಡಳಿಯ ಉಪಾಧ್ಯಕ್ಷರು ಯಾರಾಗಿದ್ದರು?**
ಪಂಡಿತ್ ಜವಾಹರ್‌ಲಾಲ್ ನೆಹರು

**53. ಶೋಷಿತ ಮಹಿಳೆಯರಿಗೆ ಶಿಕ್ಷಣ ಪ್ರಾರಂಭಿಸಿದ ಪ್ರಥಮ ಮಹಿಳಾ ಶಿಕ್ಷಕಿ ಯಾರು?**
ಸಾವಿತ್ರಿ ಬಾ ಪೂಲೆ.

**54. ನಾಸಿಕ್ ಕಲಾರಾಮ ದೇವಸ್ಥಾನವನ್ನು ಮೊದಲು ಪ್ರವೇಶಿಸಿದ ದಲಿತ ನಾಯಕ ಯಾರು?**
ಡಾ॥ ಬಿ.ಆರ್.ಅಂಬೇಡ್ಕರ್.

**55. "ಮೂಕನಾಯಕ" ಪತ್ರಿಕೆಯನ್ನು ಪ್ರಾರಂಭಿಸಿದವರು ಯಾರು?**
ಡಾ॥ ಬಿ.ಆರ್.ಅಂಬೇಡ್ಕರ್.

**56. ಅಸ್ಮಿತೆ ರಾಜಕೀಯವನ್ನು ಗುರ್ತಿಸಿದವರು ಯಾರು?**
ಎಲ್.ಎ.ಕಾಫ್‌ಮನ್.

**57. ಪ್ರಥಮ ಲೋಕಸಭೆಯ ಸ್ಪೀಕರ್ ಯಾರು?**
ಜಿ.ವಿ.ಮಾವಳಂಕರ್.

**58. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸಂಸ್ಥಾಪಕರು ಯಾರು?**
ಎ.ಓ.ಹ್ಯೂಮ್.

**59. ಬಹುಜನ ಸಮಾಜ ಪಕ್ಷದ (ಬಿ.ಎಸ್.ಪಿ)ಸಂಸ್ಥಾಪಕರು ಯಾರು?**
ಕಾನ್ಷಿರಾಮ್.

**60. ಜಿಲ್ಲಾಡಳಿತದ ಮುಖ್ಯಸ್ಥರು ಯಾರು?**
ಜಿಲ್ಲಾಧಿಕಾರಿ (DC)

**61. ಯಾವ ಕಾಯ್ದೆಯು ಅಧಿಕಾರವನ್ನು ಕಂಪನಿಯಿಂದ ಕ್ರೌನ್‌ಗೆ ವರ್ಗಾಯಿಸಿತು?**
1858ರ ಕಾಯ್ದೆ.

**62. ಬ್ರಿಟೀಷರ ಆಳ್ವಿಕೆಯಲ್ಲಿ ಮುಸ್ಲಿಂರಿಗೆ ಪ್ರಥಮಬಾರಿಗೆ ಪ್ರತ್ಯೇಕ ಮತ ಕ್ಷೇತ್ರವನ್ನು ಕಲ್ಪಿಸಿದ ಕಾಯ್ದೆ ಯಾವುದು?**
1909ರ ಭಾರತ ಸರ್ಕಾರ ಕಾಯ್ದೆ.

**63. ವಿಶ್ವಸಂಸ್ಥೆಯ ಅತ್ಯಂತ ಶಕ್ತಿಶಾಲಿ ಅಂಗ ಯಾವುದು?**
ಭದ್ರತಾಮಂಡಳಿ

**64. ಭಾರತ ಸಂವಿಧಾನದ 370ನೇ ವಿಧಿಯು ಯಾವ ರಾಜ್ಯಕ್ಕೆ ಸಂಬಂಧಿಸಿತ್ತು?**
ಜಮ್ಮು ಮತ್ತು ಕಾಶ್ಮೀರ.

**65. ಪ್ರಸ್ತುತ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳೆಷ್ಟು?**
193 ರಾಷ್ಟ್ರಗಳು.

**66. ಸಾರ್ಕ್ ಸದಸ್ಯ ರಾಷ್ಟ್ರಗಳೆಷ್ಟು?**
8 ರಾಷ್ಟ್ರಗಳು.

**67. ಭಾರತದ ಚುನಾವಣಾ ಆಯೋಗದಲ್ಲಿ ಎಷ್ಟು ಸದಸ್ಯರಿದ್ದಾರೆ?**
3 ಜನ ಸದಸ್ಯರು.

**68. ಭಾರತದಲ್ಲಿ ಮತದಾರರ ಕನಿಷ್ಠ ವಯೋಮಿತಿ ಎಷ್ಟು?**
18 ವರ್ಷಗಳು.

**69. ಲಾಲ್ ಬಹದ್ದೂರ್‌ಶಾಸ್ತ್ರಿ ಅಕಾಡೆಮಿ ಎಲ್ಲಿದೆ?**
ಮಸ್ಸೂರಿಯಲ್ಲಿದೆ.(ಐ.ಎ.ಎಸ್.ಅಧಿಕಾರಿಗಳಿಗೆ ತರಬೇತಿ ನೀಡಲು)

**70. ಸರದಾರ್ ವಲ್ಲಭಬಾಯ್ ಅಕಾಡೆಮಿ ಎಲ್ಲಿದೆ?**
ಹೈದರಾಬಾದ್‌ನಲ್ಲಿದೆ.(ಐ.ಪಿ.ಎಸ್.ಅಧಿಕಾರಿಗಳಿಗೆ ತರಬೇತಿ ನೀಡಲು)

**71. ವಿಶ್ವಸಂಸ್ಥೆಯ ಪ್ರಧಾನ ಕಛೇರಿ ಎಲ್ಲಿದೆ?**
ನ್ಯೂಯಾರ್ಕ್‌ನಲ್ಲಿದೆ.

**72. ಅಂತರರಾಷ್ಟ್ರೀಯ ನ್ಯಾಯಾಲಯ ಎಲ್ಲಿದೆ?**
ಹೇಗ್‌ನಲ್ಲಿದೆ.

**73. ಸಾಲುಮರದ ತಿಮ್ಮಕ್ಕ ಯಾವ ಜಿಲ್ಲೆಯವರು?**
ರಾಮನಗರ.

**74. ಭಾರತದಲ್ಲಿ ಎಷ್ಟು ಬಾರಿ ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಹೇರಲಾಗಿತ್ತು?**
3 ಬಾರಿ ಹೇರಲಾಗಿದೆ (1962, 1971 ಮತ್ತು 1975ರಲ್ಲಿ)

**75. 2019ರಲ್ಲಿ ಯಾವ ರಾಜ್ಯವನ್ನು ಪುನರ್‌ರಚಿಸಲಾಯಿತು?**
ಜಮ್ಮು ಮತ್ತು ಕಾಶ್ಮೀರ

## II. ಎರಡು ಅಂಕದ ಪ್ರಶ್ನೆಗಳು
**(ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.)**

**1. 'ಸೈಮನ್ ಕಮಿಷನ್' ಏಕೆ ನೇಮಿಸಲಾಯಿತು? ಇದು ಏನು ಶಿಫಾರಸ್ಸು ಮಾಡಿತು?**
* 1919ರ ಕಾಯ್ದೆಯ ಬಗ್ಗೆ ವಿಮರ್ಶಿಸಲು (ಮತ್ತು ಡಯಾರ್ಕಿಯ ಕಾರ್ಯವೈಕರಿಯ ಬಗ್ಗೆ ವರದಿ ನೀಡಲು) ನೇಮಿಸಲಾಯಿತು.
* ಬ್ರಿಟೀಷ್ ಸರ್ಕಾರ ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ನೀಡಬೇಕೆಂದು ಶಿಫಾರಸ್ಸು ಮಾಡಿತು.

**2. ಸಮ್ಮಿಶ್ರ ಸರ್ಕಾರ ಎಂದರೇನು? ಅದು ಯಾವಾಗ ಅಸ್ತಿತ್ವಕ್ಕೆ ಬರುತ್ತದೆ?**
* ಎರಡು/ಎರಡಕ್ಕಿಂತ ಹೆಚ್ಚು ಪಕ್ಷಗಳು ಸೇರಿ ಸರ್ಕಾರ ರಚಿಸುವುದೇ ಸಮ್ಮಿಶ್ರ ಸರ್ಕಾರ.
* ಇದು ಚುನಾವಣೆಯಲ್ಲಿ ಏಕೈಕ ರಾಜಕೀಯ ಪಕ್ಷ ಬಹುಮತ ಪಡೆಯದಿದ್ದಾಗ ಅಸ್ತಿತ್ವಕ್ಕೆ ಬರುತ್ತದೆ.

**3. ಸಾರ್ಕ್ ಯಾವಾಗ ಸ್ಥಾಪನೆಯಾಯಿತು? ಅದರ ಸಚಿವಾಲಯ ಎಲ್ಲಿದೆ?**
1985 ರಲ್ಲಿ ಸ್ಥಾಪನೆ. ನೇಪಾಳದ ಕಠ್ಮಂಡುವಿನಲ್ಲಿದೆ.

**4. "ಹಿಂದೂ ವಿಡೋಸ್ ಹೋಮ್" ಯಾವಾಗ ಎಲ್ಲಿ ಸ್ಥಾಪನೆಯಾಯಿತು?**
1899ರಲ್ಲಿ ಪೂನಾದಲ್ಲಿ ಸ್ಥಾಪನೆಯಾಯಿತು.

**5. ಯಾವಾಗ ಮತ್ತು ಎಲ್ಲಿ ಅಲಿಪ್ತನೀತಿ (NAM) ಪ್ರಥಮ ಸಮ್ಮೇಳನ ನಡೆಯಿತು?**
1961 ರಲ್ಲಿ ಯುಗೋಸ್ಲಾವಿಯಾದ ಬೆಲ್ಗ್ರೇಡ್‌ನಲ್ಲಿ ನಡೆಯಿತು.

**6. ಫೆಡರಲ್ ನ್ಯಾಯಾಲಯವು ಎಲ್ಲಿ ಮತ್ತು ಯಾವಾಗ ಸ್ಥಾಪನೆಯಾಯಿತು?**
1937ರಲ್ಲಿ ದೆಹಲಿಯಲ್ಲಿ ಪ್ರಾರಂಭವಾಯಿತು.

**7. ಬಾಂಬೆಯನ್ನು ಎಷ್ಟು ರಾಜ್ಯಗಳಾಗಿ ವಿಭಜಿಸಲಾಯಿತು? ಅವು ಯಾವುವು?**
ಎರಡು ರಾಜ್ಯಗಳನ್ನಾಗಿ ವಿಭಜಿಸಲಾಯಿತು. ಅವುಗಳೆಂದರೆ, ಅ. ಮಹಾರಾಷ್ಟ್ರ. ಆ. ಗುಜರಾತ್.

**8. ಪಂಜಾಬ್‌ನ್ನು ಎಷ್ಟು ರಾಜ್ಯಗಳಾಗಿ ವಿಂಗಡಿಸಲಾಯಿತು? ಅವು ಯಾವುವು?**
ಎರಡು ರಾಜ್ಯಗಳಾಗಿ ವಿಂಗಡಿಸಲಾಯಿತು. ಅವುಗಳೆಂದರೆ, ಅ. ಪಂಜಾಬ್ ಆ. ಹರಿಯಾಣ.

**9. 1935ರ ಕಾಯ್ದೆ ಎಷ್ಟು ವಿಧಿ ಮತ್ತು ಶೆಡ್ಯೂಲ್‌ಗಳನ್ನು ಹೊಂದಿದೆ?**
321 ವಿಧಿ ಮತ್ತು 10 ಶೆಡ್ಯೂಲ್‌ಗಳನ್ನು ಹೊಂದಿದೆ.

**10. ಪ್ರಾದೇಶಿಕ ಪಕ್ಷ ಎಂದರೇನು? ಒಂದು ಉದಾಹರಣೆ ಕೊಡಿ.**
ಒಂದು ನಿರ್ದಿಷ್ಟ ಪ್ರದೇಶಕ್ಕೆ ಮಾತ್ರ ತನ್ನ ಕಾರ್ಯಚರಣೆಯನ್ನು ಸೀಮಿತಗೊಳಿಸಿಕೊಂಡು ಅಲ್ಲಿನ ನೆಲ, ಜಲ, ಭಾಷೆಗಳನ್ನು ಪ್ರತಿನಿಧಿಸುವ ಹಾಗೂ ಸ್ಥಳೀಯ ಜನರ ಹಿತಕ್ಕಾಗಿ ಹೋರಾಟ ನಡೆಸುವ ರಾಜಕೀಯ ಪಕ್ಷ.
**ಉದಾಹರಣೆ:–** ತೆಲುಗುದೇಶಂ, ಡಿ.ಎಂ.ಕೆ.

**11. ಬಹುಪಕ್ಷ ಪದ್ಧತಿ ಎಂದರೇನು?ಉದಾಹರಣೆ ನೀಡಿ.**
ಒಂದು ರಾಷ್ಟ್ರದಲ್ಲಿ ಎರಡಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿರುವುದೇ ಬಹುಪಕ್ಷ ಪದ್ಧತಿ.
**ಉದಾಹರಣೆ :–** ಭಾರತ, ಫ್ರಾನ್ಸ್.

**12. ಪ್ರತ್ಯಕ್ಷ ಚುನಾವಣೆ ಎಂದರೇನು? ಉದಾಹರಣೆ ನೀಡಿ.**
ಮತದಾರರು ನೇರವಾಗಿ ಮತಗಟ್ಟೆಗೆ ಹೋಗಿ ಮತ ಚಲಾಯಿಸುವುದೇ ಪ್ರತ್ಯಕ್ಷ ಚುನಾವಣೆ.
**ಉದಾಹರಣೆ:–** ಭಾರತದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆ.

**13. ಕೇಂದ್ರಪಟ್ಟಿ ಎಂದರೇನು? ಒಂದು ಉದಾಹರಣೆ ನೀಡಿ.**
ರಾಷ್ಟ್ರೀಯ ಸಮಗ್ರತೆಯ ದೃಷ್ಟಿಯಿಂದ ಪ್ರಾಮುಖ್ಯತೆ ಪಡೆದುಕೊಂಡಿರುವ ವಿಷಯಗಳನ್ನು ಹೊಂದಿರುವ ಪಟ್ಟಿಯೇ ಕೇಂದ್ರ ಪಟ್ಟಿ.
**ಉದಾಹರಣೆ;–** ವಿದೇಶಾಂಗ ವ್ಯವಹಾರ, ರಕ್ಷಣೆ, ಹಣಚಲಾವಣೆ.

**14. ಪ್ರತಿಭಾ ಪಲಾಯನ ಎಂದರೇನು?**
ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಪ್ರತಿಭಾವಂತ ವಿದ್ಯಾರ್ಥಿಸಮೂಹ ಹೆಚ್ಚಿನ ಹಣ, ಸೌಲಭ್ಯ, ಗೌರವ ಮತ್ತು ಪ್ರತಿಷ್ಠೆಗಳಿಗಾಗಿ ವಿದೇಶಗಳಿಗೆ ಹೋಗುವುದು.

**15. ಅಸಮಾನತೆ ಎಂದರೇನು?**
ಜಾತಿ, ಮತ, ಲಿಂಗ, ಧರ್ಮ, ಅಂತಸ್ತು, ವರ್ಣ ಮತ್ತು ಜನ್ಮಸ್ಥಳ ಮೊದಲಾದವುಗಳ ಆಧಾರದ ಮೇಲೆ ತಾರತಮ್ಯ ಮಾಡುವುದು.

**16. ಭ್ರಷ್ಟಾಚಾರ ಎಂದರೇನು?**
ವೈಯುಕ್ತಿಕ ಲಾಭಕ್ಕಾಗಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವುದೇ ಭ್ರಷ್ಟಾಚಾರ.

**17. ಆಪ್ತಸ್ನೇಹಿ ಬಂಡವಾಳಶಾಹಿ ಎಂದರೇನು?**
ವಾಣಿಜ್ಯ ವ್ಯಾಪಾರಗಳಲ್ಲಿ ಯಶಸ್ಸು ಕಾಣಲು ವಾಣಿಜ್ಯೋದ್ಯಮಿಗಳು ಮತ್ತು ಸರ್ಕಾರಿ ಅಧಿಕಾರಿ ವೃಂದದ ನಡುವೆ ಇರುವ ನಿಕಟ ಸಂಬಂಧ.

**18. ಪಟೇಲ್ ಸ್ಕೀಮ್ ಎಂದರೇನು?**
ಪ್ರಾಂತ್ಯಗಳ ಏಕೀಕರಣ ಪ್ರಕ್ರಿಯೆಯ ಮೂರು ಹಂತದ ಯೋಜನೆಯೇ ಪಟೇಲ್ ಸ್ಕೀಮ್.

**19. ಆಡಳಿತ ಸೇವೆ ಎಂದರೇನು?**
ಸರ್ಕಾರಿ ನೌಕರರ ಸಮೂಹವೇ ಆಡಳಿತ ಸೇವೆ.

**20. ಆಡಳಿತ ಸೇವೆಯ ತಾಟಸ್ಥ್ಯ ಎಂದರೇನು?**
ನಾಗರಿಕ ಸೇವಾ ಸಿಬ್ಬಂದಿಯು ಅಧಿಕಾರದಲ್ಲಿ ಯಾವುದೇ ರಾಜಕೀಯ ಪಕ್ಷವಿದ್ದರೂ ತಮ್ಮ ಕರ್ತವ್ಯಗಳನ್ನು ಸಂವಿಧಾನದ ಚೌಕಟ್ಟಿನೊಳಗೆ ನಿರ್ವಹಿಸುವುದರ ಮೂಲಕ ಎಲ್ಲಾ ರಾಜಕೀಯ ಚಟುವಟಿಕೆಗಳಿಂದ ದೂರವಿರುವುದು.

**21. ಆಡಳಿತ ಸೇವೆಯಲ್ಲಿ 'ಅನಾಮಧೇಯತೆ' ಎಂದರೇನು?**
ನಾಗರಿಕ ಸೇವಾ ಸಿಬ್ಬಂದಿಯು ಹೊಗಳಿಕೆ, ತೆಗಳಿಕೆ, ಯಶಸ್ಸು, ಅಪಯಶಸ್ಸು, ಕೀರ್ತಿ ಮತ್ತು ಅಪಕೀರ್ತಿಗಳನ್ನು ಪರಿಗಣಿಸದೆ ತೆರೆಯ ಮರೆಯಲ್ಲಿ ಕೆಲಸ ಮಾಡುವುದೇ ಅನಾಮಧೇಯತ್ವ.

**22. ಪರಿಸರ ಎಂದರೇನು?**
ನಮ್ಮ ಸುತ್ತಮುತ್ತಲಿನ ವಾತಾವರಣವೇ ಪರಿಸರ.

**23. ರಾಷ್ಟ್ರೀಯ ಭಾವೈಕ್ಯತೆ ಎಂದರೇನು?**
ಭಾವನಾತ್ಮಕವಾಗಿ, ಮಾನಸಿಕವಾಗಿ ಹಾಗೂ ರಾಜಕೀಯವಾಗಿ ಜನರನ್ನು ಒಗ್ಗೂಡಿಸುವ ಪ್ರಕ್ರಿಯೆಯೇ ರಾಷ್ಟ್ರೀಯ ಭಾವೈಕ್ಯತೆ.

**24. ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಎಂದರೇನು?**
ಸಮ್ಮಿಶ್ರ ಸರ್ಕಾರ ವ್ಯವಸ್ಥೆಯಲ್ಲಿ ಮೈತ್ರಿಕೂಟದ ಪಕ್ಷಗಳು ತಮ್ಮ ಸಿದ್ಧಾಂತವನ್ನು ಬದಿಗೊತ್ತಿ ಸರ್ಕಾರವನ್ನು ನಡೆಸಿಕೊಂಡು ಹೋಗಲು ಕೆಲವು ಸಾಮಾನ್ಯ ಕನಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದೇ ಸಾಮಾನ್ಯ ಕನಿಷ್ಟ ಕಾರ್ಯಕ್ರಮ.

**25. ಚುನಾವಣೋತ್ತರ ಮೈತ್ರಿ ಎಂದರೇನು?**
ಚುನಾವಣೆಯ ನಂತರ ಎರಡು/ಎರಡಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಮೈತ್ರಿ ಮಾಡಿಕೊಳ್ಳುವುದು.

**26. ಪಕ್ಷಾಂತರ ನಿಷೇಧ ಕಾಯ್ದೆ ಎಂದರೇನು?**
ಶಾಸನಸಭೆಯ ಸದಸ್ಯರು ತಾವು ಆಯ್ಕೆಯಾದ ಪಕ್ಷವನ್ನು ತೊರೆದು ಮತ್ತೊಂದು ಪಕ್ಷಕ್ಕೆ ಹೋಗುವುದನ್ನು ತಡೆಗಟ್ಟಲು ರೂಪಿಸಿದ ಕಾಯ್ದೆ.

**27. 'ಮರ್ಯಾದ ಹತ್ಯೆ' ಎಂದರೇನು?**
ಆಧುನಿಕತೆಯ ಪರಿಣಾಮವಾಗಿ ಯುವಜನತೆ ಅಂತರ್ ಜಾತಿ/ಅಂತರ್ ಧರ್ಮೀಯ ವಿವಾಹ ಮಾಡಿಕೊಂಡಾಗ ಕುಟುಂಬದ ಗೌರವವನ್ನು ಕಾಪಾಡಲು ಮದುವೆಯಾದ ಯುವಕ/ಯುವತಿಯನ್ನು ಕುಟುಂಬದವರೇ ಹತ್ಯೆ ಮಾಡುವುದು.

**28. ಅಸ್ಮಿತೆ ರಾಜಕಾರಣದ ಅರ್ಥವನ್ನು ಬರೆಯಿರಿ.**
ಅಸ್ಮಿತೆ ರಾಜಕೀಯ ಎಂಬುದು ಗುರ್ತಿಸಿಕೊಳ್ಳುವ ರಾಜಕೀಯವಾಗಿದ್ದು, ಸ್ವಂತ ಲಾಭಕ್ಕಾಗಿ ಪ್ರಯತ್ನಿಸುವ ಪ್ರಕ್ರಿಯೆಯಾಗಿದೆ.

**29. ರಾಷ್ಟ್ರ ನಿರ್ಮಾಣದ ಅರ್ಥವನ್ನು ತಿಳಿಸಿ.**
ಜನರನ್ನು ಸಂಘಟಿಸಿ, ಅವರಲ್ಲಿ ಸಾಮರಸ್ಯ ಮೂಡಿಸಿ, ಎಲ್ಲರೂ ಒಪ್ಪಿಕೊಳ್ಳುವ ವ್ಯವಸ್ಥೆಯನ್ನು ನಿರ್ಮಿಸುವ ವಿಶಾಲ ಪ್ರಕ್ರಿಯೆಯೇ ರಾಷ್ಟ್ರ ನಿರ್ಮಾಣ.

**30. ವಿದೇಶಾಂಗ ನೀತಿಯ ಅರ್ಥವನ್ನು ಬರೆಯಿರಿ.**
ಸ್ವತಂತ್ರ ರಾಷ್ಟ್ರವೊಂದು ಮತ್ತೊಂದು ಸ್ವತಂತ್ರ ರಾಷ್ಟ್ರದೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯೇ ವಿದೇಶಾಂಗ ನೀತಿ.

**31. ಅಂತರರಾಷ್ಟ್ರೀಯ ಸಂಬಂಧಗಳ ಒಂದು ವ್ಯಾಖ್ಯೆ ನೀಡಿ.**
ಓಲಾ ಜೋಸೆಫ್‌ರವರ ಪ್ರಕಾರ "ಅಂತರರಾಷ್ಟ್ರೀಯ ಸಂಬಂಧ ಎಂಬುದು ಅಂತರರಾಷ್ಟ್ರೀಯ ವ್ಯವಸ್ಥೆಯೊಳಗೆ ರಾಷ್ಟ್ರಗಳ ನಡುವೆ ಅಥವಾ ವಿವಿಧ ಸಂಘಟನೆಗಳ ಸದಸ್ಯರ ನಡುವೆ ಉಂಟಾಗುವ ಪ್ರಕ್ರಿಯೆಗಳ ಅಧ್ಯಯನವಾಗಿರುತ್ತದೆ".

**32. ಪ್ರಾಚೀನ ಕಾಲದ ನಾಲ್ಕು ಸಾಮಾಜಿಕ ವರ್ಗಗಳಾವುವು?**
ಅ. ಬ್ರಾಹ್ಮಣ ಆ. ಕ್ಷತ್ರಿಯಾ
ಇ. ವೈಶ್ಯ ಈ. ಶೂದ್ರ.

**33. ಡಾ॥ ಬಿ.ಆರ್.ಅಂಬೇಡ್ಕರ್‌ರವರ ಮೂರು ಹೆಸರಾಂತ ವಾಣಿಗಳಾವುವು?**
ಅ. ಶಿಕ್ಷಣ ಆ. ಸಂಘಟನೆ ಇ. ಹೋರಾಟ

**34. ಭಾರತದಲ್ಲಿ ಭ್ರಷ್ಟಾಚಾರ ತಡೆಗಟ್ಟಲು ಇರುವ ಯಾವುದಾದರೂ ಎರಡು ಸಂಸ್ಥೆಗಳನ್ನು ಹೆಸರಿಸಿ.**
ಅ. ಲೋಕ್‌ಪಾಲ್ ಸಂಸ್ಥೆ
ಆ. ಲೋಕಾಯುಕ್ತ ಸಂಸ್ಥೆ.

**35. ಶ್ರೀಲಂಕಾದ ತಮಿಳು ಜನರಲ್ಲಿರುವ ಯಾವುದಾದರೂ ಎರಡು ಗುಂಪುಗಳನ್ನು ಹೆಸರಿಸಿ.**
ಅ. ಪುರಾತನ ತಮಿಳರು. ಆ. ವಲಸೆ ತಮಿಳರು.

**36. ಸಿರಿಯಾದ ಯಾವುದಾದರು ಎರಡು ಜನಾಂಗೀಯ ಗುಂಪುಗಳನ್ನು ತಿಳಿಸಿ.**
ಅ. ಅರಬ್ಸ್ ಆ. ಕರ್ಡ್ಸ್

**37. ಯಾವುದಾದರು ಎರಡು ಮಿಲಿಟರಿ ಬಣಗಳನ್ನು ತಿಳಿಸಿ.**
ಅ. ನ್ಯಾಟೋ ಆ. ಸಿಯಾಟೊ.

**38. ಭಾರತದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡಲು ಇರುವ ಎರಡು ಅಡಚಣೆಗಳು ಯಾವುವು?**
ಅ. ಭ್ರಷ್ಟ ರಾಜಕಾರಣಿಗಳು
ಆ. ಅಧಿಕಾರಶಾಹಿಯ ಅನೈತಿಕತೆ

**39. ಅನಕ್ಷರತೆಗೆ ಎರಡು ಕಾರಣಗಳನ್ನು ತಿಳಿಸಿ.**
ಅ. ಬಡತನ ಆ. ಜನಸಂಖ್ಯಾಸ್ಫೋಟ

**40. ಬಾಂಗ್ಲಾ ದೇಶದ ವಿಮೋಚನೆಗೆ ಸಂಬಂಧಿಸಿದ ಯಾವುದಾದರೂ ಎರಡು ಕಾರಣಗಳನ್ನು ಬರೆಯಿರಿ.**
ಅ. 1972ರಲ್ಲಿ ಭಾರತ–ಬಾಂಗ್ಲಾದೇಶ ವ್ಯಾಪಾರಿ ಒಪ್ಪಂದದ ಜೊತೆಗೆ 25 ವರ್ಷಗಳ ಸ್ನೇಹ ಸಹಕಾರ ಮತ್ತು ಶಾಂತಿ ಒಪ್ಪಂದಕ್ಕೆ ಸಹಿಹಾಕಿದ್ದು.
ಆ. 1974ರಲ್ಲಿ ಭಾರತ–ಬಾಂಗ್ಲಾದೇಶ ಗಡಿ ಒಪ್ಪಂದಕ್ಕೆ ಸಹಿಮಾಡುವುದರ ಜೊತೆಗೆ ಬಹಳ ಹಿಂದಿನಿಂದಲೂ ಬಂದಿದ್ದ ಫರಕ್ಕಾ ಆಣೆಕಟ್ಟು ಸಮಸ್ಯೆಯನ್ನು ಶಾಂತಿ ಮಾತುಕತೆ ಮೂಲಕ ಸರಿಪಡಿಸಿಕೊಂಡಿದ್ದು.

**41. ಭಾರತದ ಯಾವುದಾದರು ಎರಡು ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಹೆಸರಿಸಿ.**
ಅ. ಕಾಂಗ್ರೆಸ್. ಆ. ಬಿ.ಜೆ.ಪಿ.

**42. ಕೇಂದ್ರ ಲೋಕಸೇವಾ ಆಯೋಗದ ಎರಡು ಕಾರ್ಯಗಳನ್ನು ತಿಳಿಸಿ.**
ಅ. ಕೇಂದ್ರ ಮತ್ತು ಅಖಿಲ ಭಾರತ ಸೇವೆಗಳ ನೇಮಕಾತಿಗೆ ಸ್ಪರ್ಧಾತ್ಮ ಪರೀಕ್ಷೆಗಳನ್ನು ನಡೆಸುವುದು.
ಆ. ತಮ್ಮ ಕರ್ತವ್ಯ ನಿರ್ವಹಣೆಗೆ ಸಂಬಂಧಿಸಿದ ವಾರ್ಷಿಕ ವರದಿಯನ್ನು ರಾಷ್ಟ್ರಪತಿಗೆ ಸಲ್ಲಿಸುವುದು.

**43. ಮುಖ್ಯ ಕಾರ್ಯದರ್ಶಿಯ ಎರಡು ಕಾರ್ಯಗಳನ್ನು ತಿಳಿಸಿ.**
ಅ. ಮುಖ್ಯಮಂತ್ರಿಗೆ ಸಲಹೆ ನೀಡುವುದು.
ಆ. ಇತರೆ ಕಾರ್ಯದರ್ಶಿಗಳು ನಿರ್ವಹಿಸಿದ ಜವಾಬ್ದಾರಿ ಕಾರ್ಯಗಳನ್ನು ಗಮನಿಸುವುದು.

**44. ಕರ್ನಾಟಕ ರೈತಸಂಘದ ಇಬ್ಬರು ನಾಯಕರ ಹೆಸರನ್ನು ತಿಳಿಸಿ.**
ಅ. ಪ್ರೊ.ಎಂ.ಡಿ. ನಜುಂಡಸ್ವಾಮಿ
ಆ. ಎನ್.ಡಿ. ಸುಂದರೇಶ್.

**45. ಸಮವರ್ತಿ ಪಟ್ಟಿಯಲ್ಲಿರುವ ಎರಡು ವಿಷಯಗಳನ್ನು ತಿಳಿಸಿ.**
ಅ. ವಿವಾಹ ಮತ್ತು ವಿವಾಹ ವಿಚ್ಛೇದನ.
ಆ. ಕಾರ್ಮಿಕರ ಕಲ್ಯಾಣ.

**46. ವಿಶ್ವಸಂಸ್ಥೆಯ ಎರಡು ಅಂಗಗಳನ್ನು ತಿಳಿಸಿ.**
ಅ. ಸಾಮಾನ್ಯ ಸಭೆ. ಆ. ಭದ್ರತಾ ಮಂಡಳಿ.

**47. ಪಂಚಶೀಲದ ಯಾವುದಾದರೂ ಎರಡು ತತ್ವಗಳನ್ನು ಬರೆಯಿರಿ.**
ಅ. ಶಾಂತಿಯುತ ಸಹಬಾಳ್ವೆ.
ಆ. ಪರಸ್ಪರರು ದಾಳಿ ಮಾಡದಿರುವುದು.

**48. ಮಹಿಳೆಯರ ರಕ್ಷಣೆಗೆ ಸಂಬಂಧಿಸಿದ ಎರಡು ಕಾಯ್ದೆಗಳನ್ನು ಹೆಸರಿಸಿ.**
ಅ. ವರದಕ್ಷಿಣೆ ನಿಷೇಧ ಕಾಯ್ದೆ.
ಆ. ಬಾಲ್ಯ ವಿವಾಹ ನಿಷೇಧ ಕಾಯ್ದೆ.

**49. NDA ಯ ಮಿತ್ರ ಪಕ್ಷಗಳನ್ನು ಹೆಸರಿಸಿ.**
ಅ. ಶಿವಸೇನೆ. ಆ. ಅಕಾಲಿದಳ.

**50. UPA ಯ ಮಿತ್ರ ಪಕ್ಷಗಳನ್ನು ಹೆಸರಿಸಿ.**
ಅ. ಬಿ.ಎಸ್.ಪಿ (ಬಹುಜನ ಸಮಾಜವಾದಿ ಪಕ್ಷ)
ಆ. ಆರ್.ಜೆ.ಡಿ (ರಾಷ್ಟ್ರೀಯ ಜನತಾದಳ)

**51. ಬ್ರಿಕ್ಸ್‌ನ ಎರಡು ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.**
ಅ. ಭಾರತ ಆ. ಚೀನಾ.

**52. ಸಾರ್ಕ್‌ನ ಎರಡು ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.**
ಅ. ಭಾರತ, ಆ. ಶ್ರೀಲಂಕಾ.

**53. ಭದ್ರತಾ ಮಂಡಳಿಯ ಎರಡು ಖಾಯಂ ಸದಸ್ಯ ರಾಷ್ಟ್ರಗಳನ್ನು ತಿಳಿಸಿ.**
ಅ. ಅಮೇರಿಕಾ ಆ. ಬ್ರಿಟನ್.

**54. ಯಾವುದಾದರೂ ಎರಡು NAM ಸ್ಥಾಪಕ ಸದಸ್ಯ ರಾಷ್ಟ್ರಗಳನ್ನು ಹೆಸರಿಸಿ.**
ಅ. ಭಾರತ. ಆ. ಇಂಡೋನೇಷಿಯಾ.

**55. ವಿಶ್ವಸಂಸ್ಥೆಯ ಎರಡು ಉದ್ದೇಶಗಳನ್ನು ತಿಳಿಸಿ.**
ಅ. ಯುದ್ಧವನ್ನು ತಡೆಗಟ್ಟುವುದು.
ಆ. ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.

**56. "ಪೂನಾ ಒಪ್ಪಂದ" ಯಾರ ನಡುವೆ ಮತ್ತು ಯಾವಾಗ ನಡೆಯಿತು?**
ಮಹಾತ್ಮಗಾಂಧಿ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ನಡುವೆ 24ನೇ ಸೆಪ್ಟಂಬರ್ 1932ರಂದು ನಡೆಯಿತು.

**57. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದವರು ಯಾರು?**
ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಅಯೂಬ್ ಖಾನ್.

**58. ಪಂಚಶೀಲ ತತ್ವಕ್ಕೆ ಸಹಿ ಹಾಕಿದವರು ಯಾರು?**
ಜವಾಹರ್‌ಲಾಲ್ ನೆಹರು ಮತ್ತು ಚೌ–ಎನ್–ಲಾಯ್

**59. ಸಿಮ್ಲಾ ಒಪ್ಪಂದಕ್ಕೆ ಸಹಿ ಹಾಕಿದವರು ಯಾರು?**
ಇಂದಿರಾಗಾಂಧಿ ಮತ್ತು ಝುಡ್.ಎ.ಭುಟ್ಟೋ.

**60. ಚುನಾವಣಾ ಸುಧಾರಣೆಗೆ ಶಿಫಾರಸ್ಸು ಮಾಡಿದ ಎರಡು ಸಮಿತಿಗಳನ್ನು ಹೆಸರಿಸಿ.**
ಅ. ತಾರ್ಕುಂಡೆ ಸಮಿತಿ
ಆ. ಇಂದ್ರಜಿತ್‌ಗುಪ್ತ ಸಮಿತಿ

**61. ಸರ್ಕಾರವೇ (ರಾಜ್ಯವೇ) ಚುನಾವಣಾ ವೆಚ್ಚವನ್ನು ಭರಿಸಲು ಶಿಫಾರಸ್ಸು ಮಾಡಿದ ಸಮಿತಿಗಳಾವುವು?**
ಅ. ತಾರ್ಕುಂಡೆ ಸಮಿತಿ ಆ. ವಾಂಚೂ ಸಮಿತಿ

**62. ಚುನಾವಣಾ ಅಭ್ಯರ್ಥಿ ನಾಮಪತ್ರ ಸಲ್ಲಿಸುವಾಗ ಕಡ್ಡಾಯವಾಗಿ ಘೋಷಿಸಬೇಕಾದ ಅಂಶಗಳಾವುವು?**
ಅ. ಅಪರಾಧದ ವಿವರ ಆ. ಆಸ್ತಿಯ ವಿವರ
ಇ. ಶೈಕ್ಷಣಿಕ ವಿವರ

**63. ಭಾರತದಲ್ಲಿ ನಡೆದ ಸಾರ್ಕ್ ಶೃಂಗ ಸಭೆಗಳನ್ನು ಹೆಸರಿಸಿ.**

ಅ. ಎರಡನೇ ಸಾರ್ಕ್ ಶೃಂಗ ಸಭೆ (1986 – ಬೆಂಗಳೂರು)
ಆ. ಎಂಟನೇ ಸಾರ್ಕ್ ಶೃಂಗ ಸಭೆ (1995 – ದೆಹಲಿ)
ಇ. ಹದಿನಾಲ್ಕನೇ ಸಾರ್ಕ್ ಶೃಂಗ ಸಭೆ (2007 – ದೆಹಲಿ)

**64. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಎಷ್ಟು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಲಾಯಿತು? ಅವು ಯಾವುವು?**

ಎರಡು ಕೇಂದ್ರಾಡಳಿತ ಪ್ರದೇಶಗಳು
ಅ) ಜಮ್ಮು ಮತ್ತು ಕಾಶ್ಮೀರ ಆ) ಲಡಾಖ್

## III. ಐದು ಅಂಕದ ಪ್ರಶ್ನೆಗಳು
**(ಈ ಕೆಳಗಿನ ಪ್ರಶ್ನೆಗಳಿಗೆ 15–20ವಾಕ್ಯಗಳಲ್ಲಿ ಉತ್ತರಿಸಿ)**

**1. 1947ರ ಭಾರತ ಸ್ವಾತಂತ್ರ್ಯ ಕಾಯ್ದೆಯ ಮುಖ್ಯಾಂಶಗಳನ್ನು ವಿವರಿಸಿ.**

ಈ ಕಾಯ್ದೆಯು ಮೌಂಟ್‌ಬ್ಯಾಟನ್ ಯೋಜನೆಯ ವಿಸ್ತರಣೆಯಾಗಿದ್ದು, ಇದು ಬ್ರಿಟೀಷರ ಅಂತಿಮ ಕಾಯ್ದೆಯಾಗಿದೆ. ಇದರ ಮುಖ್ಯಾಂಶಗಳೆಂದರೆ,

* ಭಾರತವನ್ನು ವಿಭಜಿಸಿ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವಾತಂತ್ರ ರಾಷ್ಟ್ರಗಳ ರಚನೆಗೆ ಅವಕಾಶ ನೀಡಿತು.
* ಪಾಕಿಸ್ತಾನಕ್ಕೆ ಸೇರಿದ ಪ್ರಾಂತ್ಯಗಳನ್ನು ಬಿಟ್ಟು ಉಳಿದ ಎಲ್ಲಾ ಬ್ರಿಟೀಷ್–ಇಂಡಿಯಾ ಪ್ರಾಂತ್ಯಗಳು ಭಾರತದ ಭೂಭಾಗದ ವ್ಯಾಪ್ತಿಗೆ ಬಂದವು.
* ಪಾಕಿಸ್ತಾನದ ಭೂಪ್ರದೇಶ ಪೂರ್ವಬಂಗಾಳ, ಪಶ್ಚಿಮಪಂಜಾಬ್, ಸಿಂಧ್, ಬಲೂಚಿಸ್ತಾನ, ಅಸ್ಸಾಂನ ಸಿಲ್ಹಟ್ ಮತ್ತು ವಾಯುವ್ಯ ಗಡಿ ಪ್ರಾಂತ್ಯಗಳನ್ನು ಒಳಗೊಂಡಿರುತ್ತದೆ.
* ದೇಶೀಯ ಸಂಸ್ಥಾನಗಳು ಯಾವುದೇ ರಾಷ್ಟ್ರಗಳಲ್ಲಿ ವಿಲೀನವಾಗಲು ಸ್ವಾತಂತ್ರ್ಯಪಡೆದುಕೊಂಡವು.
* ಭಾರತದ ರಾಜ್ಯಗಳ ಮೇಲೆ ಚಕ್ರವರ್ತಿಯ ಅಧಿಪತ್ಯ ಕೊನೆಗೊಂಡಿತು.
* ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಹುದ್ದೆ ರದ್ದು ಆಯಿತು.
* ವೈಸ್‌ರಾಯ್ ಹುದ್ದೆಯನ್ನು ರದ್ದುಮಾಡಿ ಪ್ರಾಂತ್ಯಗಳಲ್ಲಿ ಗೌರ್ನರ್ ಜನರಲ್ ನೇಮಕಕ್ಕೆ ಅವಕಾಶ ನೀಡಿತು.
* ಪ್ರತಿಯೊಂದು ರಾಷ್ಟ್ರದ 'ಸಂವಿಧಾನ ರಚನಾ ಸಭೆ'ಯು ಶಾಸಕಾಂಗ ಅಧಿಕಾರಗಳನ್ನು ಚಲಾಯಿಸುತ್ತದೆ.
* ಭಾರತ ಮತ್ತು ಪಾಕ್ ವಿಭಜನೆ ನಂತರ ಗಡಿಗಳನ್ನು ಗುರ್ತಿಸಲು ಸರ್ ಸಿರಿಲ್ ರ್‍ಯಾಡ್‌ಕ್ಲಿಪ್ ರವರ ಅಧ್ಯಕ್ಷತೆಯಲ್ಲಿ ಗಡಿರೇಖೆ ಆಯೋಗವನ್ನು ರಚಿಸಲಾಯಿತು.

ಈ ಕಾಯ್ದೆಯನ್ನು ಅನುಮೋದಿಸುವುದರೊಂದಿಗೆ ಭಾರತದಲ್ಲಿ ಬ್ರಿಟೀಷರ ಆಡಳಿತವನ್ನು ಕೊನೆಗಾಣಿಸಿ ಭಾರತ ಮತ್ತು ಪಾಕಿಸ್ತಾನವೆಂಬ ಎರಡು ಸ್ವತಂತ್ರ ರಾಷ್ಟ್ರಗಳು ಉದಯಿಸಿದವು.

**2. ಮಧ್ಯಂತರ ಸರ್ಕಾರದ ಬಗ್ಗೆ ಟಿಪ್ಪಣಿ ಬರೆಯಿರಿ.**

1946ರ ಕ್ಯಾಬಿನೆಟ್ ಮಿಷನ್ ಪ್ಲಾನ್ ಪ್ರಕಾರ ಭಾರತದಲ್ಲಿ ಮಧ್ಯಂತರ ಸರ್ಕಾರವು 2 ಸೆಪ್ಟಂಬರ್ 1946 ರಂದು ರಚನೆಯಾಗಿ 15 ಆಗಸ್ಟ್ 1947ರ ವರೆಗೆ ಅಸ್ತಿತ್ವದಲ್ಲಿತ್ತು. ಈ ತಾತ್ಕಾಲಿಕ ಸರ್ಕಾರವು ಭಾರತವನ್ನು ಬ್ರಿಟೀಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯದೆಡೆಗೆ ಕೊಂಡೊಯ್ಯುವ ಉದ್ದೇಶವನ್ನು ಹೊಂದಿತ್ತು.ಹೊಸದಾಗಿ ಚುನಾಯಿಸಲ್ಪಟ್ಟ ಸಂವಿಧಾನ ರಚನಾಸಭೆಯಿಂದ ತಾತ್ಕಾಲಿಕ ಸರ್ಕಾರವನ್ನು ರಚಿಸಲಾಯಿತು.ಈ ಸಂವಿಧಾನ ರಚನಾ ಸಮಿತಿಯು ಶಾಸಕಾಂಗವಾಗಿ ಕಾರ್ಯ ನಿರ್ವಹಿಸಿದರೆ, ವೈಸ್‌ರಾಯ್‌ರವರ ಕಾರ್ಯಕಾರಿ ಮಂಡಳಿಯು ತಾತ್ಕಾಲಿಕ ಸರ್ಕಾರದ ಕಾರ್ಯಾಂಗವಾಗಿ ಕಾರ್ಯ ನಿರ್ವಹಿಸಿತು. ಪ್ರಧಾನಮಂತ್ರಿಯ ಅಧಿಕಾರವನ್ನು ಕಾರ್ಯಕಾರಿ ಮಂಡಳಿಯ ಉಪಾಧ್ಯಕ್ಷರಿಗೆ ನೀಡಲಾಗಿತ್ತು.ಪಂಡಿತ್ ಜವಾಹರ್‌ಲಾಲ್ ನೆಹರುರವರನ್ನು ಕಾರ್ಯಕಾರಿ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಕಾರ್ಯಕಾರಿ ಮಂಡಳಿಯ ಸದಸ್ಯರೆಂದರೆ.

1 ಜವಾಹರ್‌ಲಾಲ್ ನೆಹರು – ಪ್ರಧಾನಮಂತ್ರಿ
2 ಸರ್ದಾರ್ ವಲ್ಲಭಭಾಯಿ ಪಟೇಲ್– ಗೃಹಸಚಿವರು
3 ಡಾ. ಬಿ.ಆರ್.ಅಂಬೇಡ್ಕರ್ – ಕಾನೂನು ಸಚಿವರು
4 ಮೌಲಾನ ಅಬ್ದುಲ್ ಕಲಾಂ ಅಜಾದ್ – ಶಿಕ್ಷಣ ಸಚಿವರು

ಈ ರೀತಿ ಇನ್ನೂ 12ಜನ ಸಚಿವರಿದ್ದರು. ಈ ಮಧ್ಯಂತರ ಸರ್ಕಾರವು 1947 ರವರೆಗೂ ಭಾರತವು ಬ್ರಿಟೀಷರ ಪ್ರಾಬಲ್ಯದಲ್ಲಿದ್ದರೂ ಅಮೇರಿಕಾ ದೇಶವನ್ನೊಳಗೊಂಡಂತೆ ಇತರೆ ರಾಷ್ಟ್ರಗಳ ಜೊತೆ ರಾಜತಾಂತ್ರಿಕ ಸಂಬಂಧವನ್ನು ಹೊಂದಿತ್ತು.

**3. ಪ್ರಥಮ ಮಹಾಚುನಾವಣೆಯ ಬಗ್ಗೆ ಟಿಪ್ಪಣಿ ಬರೆಯಿರಿ.**

ಭಾರತದಲ್ಲಿ ಲೋಕಸಭೆಗೆ ಮೊದಲ ಮಹಾ ಚುನಾವಣೆಯನ್ನು ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿಯನ್ನು ಆಧರಿಸಿ ಅಕ್ಟೋಬರ್ 1951 ರಿಂದ ಫೆಬ್ರವರಿ 1952ರ ವರೆಗೆ ಪ್ರಪ್ರಥಮ ಮುಖ್ಯ ಚುನಾವಣಾ ಆಯುಕ್ತರಾದ ಸುಕುಮಾರ್ ಸೇನ್‌ರವರ ನಾಯಕತ್ವದಲ್ಲಿ ನಡೆಸಲಾಯಿತು. ಈ ಚುನಾವಣೆಯ ಮುಖ್ಯಾಂಶಗಳೆಂದರೆ,

* ಚುನಾವಣೆ ನಡೆದ ಒಟ್ಟು ಸ್ಥಾನಗಳು(ಲೋಕಸಭೆ ಮತ್ತು ವಿಧಾನಸಭಾ ಸ್ಥಾನಗಳು) – 4500.
* ಚುನಾವಣೆ ನಡೆದ ಒಟ್ಟು ಲೋಕಸಭಾ ಸ್ಥಾನಗಳು – 489
* ಮತದಾರರ ಸಂಖ್ಯೆ – 176 ಮಿಲಿಯನ್
* ಮತದಾನ ಮಾಡಿದವರ ಒಟ್ಟು ಸಂಖ್ಯೆ – 105.5 ಮಿಲಿಯನ್ (ಶೇ.45)
* ಮತಗಟ್ಟೆಗಳ ಸಂಖ್ಯೆ – 2,24,000
* ಚುನಾವಣಾ ಕಣದಲ್ಲಿದ್ದ ರಾಜಕೀಯ ಪಕ್ಷಗಳು – 70
* ಚುನಾವಣಾ ಅಭ್ಯರ್ಥಿಗಳು – 1800
* ಚುನಾವಣಾ ಫಲಿತಾಂಶ – ಕಾಂಗ್ರೆಸ್ ಪಕ್ಷ 364 ಸ್ಥಾನಗಳೊಂದಿಗೆ ಗೆಲುವು.
* ಶೇಕಡಾವಾರು ಮತದಾನ – ಗ್ರಾಮಾಂತರ ಪ್ರದೇಶದಲ್ಲಿ

ಶೇ.60 ಮತ್ತು ನಗರ ಪ್ರದೇಶದಲ್ಲಿ ಶೇ.40 ಮತದಾನವಾಯಿತು.

* ಡಾ॥ ಬಿ.ಆರ್.ಅಂಬೇಡ್ಕರ್ ಬಾಂಬೆ ಕ್ಷೇತ್ರದಲ್ಲಿ ಕಜ್ರೊಲ್ಕರ್ ಎಂಬುವರಿಂದ ಸೋಲು.

ಈ ಮಹಾ ಚುನಾವಣೆ ಪ್ರಜಾಪ್ರಭುತ್ವ ಇತಿಹಾಸದಲ್ಲೇ ಒಂದು ಬೃಹತ್ ರಾಜಕೀಯ ಪ್ರಯೋಗವಾಗುವುದರ ಮೂಲಕ ಪ್ರಜೆಗಳು ಪ್ರಜಾಪ್ರಭುತ್ವಲ್ಲಿ ಇಟ್ಟಿದ್ದ ವಿಶ್ವಾಸವನ್ನು ಕಾರ್ಯರೂಪಕ್ಕೆ ತರುವ ಒಂದು ದಿಟ್ಟ ಹೆಜ್ಜೆಯಾಯಿತು.

**4. ಪಟೇಲ್ ಸ್ಕೀಮ್ ಕುರಿತು ಟಿಪ್ಪಣಿ ಬರೆಯಿರಿ.**

ಮೂರು ಹಂತಗಳಲ್ಲಿ ನಡೆದ ಭಾರತದ ಪ್ರಾಂತ್ಯಗಳ ಏಕೀಕರಣ ಪ್ರಕ್ರಿಯೆಯೇ ಪಟೇಲ್ ಸ್ಕೀಮ್. ಆ ಹಂತಗಳೆಂದರೆ,

1. ಪ್ರಾಂತ್ಯಗಳೊಂದಿಗೆ ಸಣ್ಣರಾಜ್ಯಗಳ ವಿಲೀನ
2. ಸಣ್ಣ ರಾಜ್ಯಗಳ ಗುಂಪು
3. ಚೀಫ್ ಕಮಿಷನರ್ಸ್ ಪ್ರಾಂತ್ಯಗಳ ಏಕೀಕರಣ.

**5. ಪ್ರತ್ಯಕ್ಷ ಚುನಾವಣೆಯ ಲಕ್ಷಣಗಳನ್ನು ಬರೆಯಿರಿ.**

ಮತದಾರರು ನೇರವಾಗಿ ಮತಗಟ್ಟೆಗೆ ಹೋಗಿ ಮತ ಚಲಾಯಿಸುವುದೇ ಪ್ರತ್ಯಕ್ಷ ಚುನಾವಣೆ.

**ಉದಾಹರಣೆ;-** ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳು. ಇದರ ಲಕ್ಷಣಗಳೆಂದರೆ,

* ಪ್ರಜಾಸತಾತ್ಮಕವಾದುದು
* ಪ್ರಜಾಪ್ರತಿನಿಧಿಗಳ ಮೇಲೆ ನಿಯಂತ್ರಣ
* ರಾಜಕೀಯ ಪರಿಜ್ಞಾನವನ್ನು ಮೂಡಿಸುತ್ತದೆ
* ಸಾರ್ವಜನಿಕರೊಂದಿಗೆ ಸಂಪರ್ಕ
* ಯೋಗ್ಯ ಅಭ್ಯರ್ಥಿಗಳ ಅಯ್ಕೆ

ಈ ಪ್ರತ್ಯಕ್ಷ ಚುನಾವಣೆಯು ಹೆಚ್ಚಾಗಿ ಅಕ್ಷರಸ್ಥರನ್ನು ಹೊಂದಿರುವ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೆಚ್ಚು ಸೂಕ್ತವಾಗಿದೆ.

**6. ಪರೋಕ್ಷ ಚುನಾವಣೆಯ ಲಕ್ಷಣಗಳನ್ನು ಬರೆಯಿರಿ.**

ಮತದಾರರು ನೇರವಾಗಿ ಮತದಾನದಲ್ಲಿ ಪಾಲ್ಗೊಳ್ಳದೆ ಪ್ರಜೆಗಳಿಂದ ಆಯ್ಕೆಯಾದ ಪ್ರಜಾಪ್ರತಿನಿಧಿಗಳು.

ಮತದಾನಮಾಡುವುದೇ ಪರೋಕ್ಷ ಚುನಾವಣೆ. **ಉದಾಹರಣೆ;-** ರಾಜ್ಯಸಭೆ ಮತ್ತು ವಿಧಾನಪರಿಷತ್ ಚುನಾವಣೆ.

ಇದರ ಲಕ್ಷಣಗಳೆಂದರೆ,

* ಸಮರ್ಥ ಅಭ್ಯರ್ಥಿಗಳ ಆಯ್ಕೆ
* ಪ್ರಚಾರದ ಆರ್ಭಟವಿಲ್ಲ
* ಶಾಂತಿಯುತ ಮತದಾನ
* ಭಾವೋದ್ರೇಕಕ್ಕೆ ಆಸ್ಪದವಿಲ್ಲ
* ಹಿಂದುಳಿದ ರಾಷ್ಟ್ರಗಳಿಗೆ ಸೂಕ್ತ

**7. ಚುನಾವಣಾ ಆಯೋಗದ ಅಧಿಕಾರಗಳು ಮತ್ತು ಕಾರ್ಯಗಳನ್ನು ವಿವರಿಸಿ**

ಚುನಾವಣೆ ನಡೆಸುವ ಮೂಲಕ ಚುನಾವಣೆಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಾಧಿಕಾರವನ್ನು ಹೊಂದಿರುವ ಆಯೋಗವೇ ಚುನಾವಣಾ ಆಯೋಗ.ಇದರ ಅಧಿಕಾರ ಮತ್ತು ಕಾರ್ಯಗಳೆಂದರೆ,

* ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಪರಿಸ್ಕರಿಸುವುದು.
* ರಾಷ್ಟ್ರಪತಿ, ಉಪರಾಷ್ಟ್ರಪತಿ, ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನಪರಿಷತ್‌ಗಳಿಗೆ ಚುನಾವಣೆ ನಡೆಸುವುದು.
* ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವುದು.
* ರಾಜಕೀಯ ಪಕ್ಷಗಳಿಗೆ ಚಿಹ್ನೆ ನೀಡುವುದು.
* ರಾಜಕೀಯ ಪಕ್ಷಗಳ ಮಾನ್ಯತೆ ಮತ್ತು ಚಿಹ್ನೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತೀರ್ಮಾನಿಸುವುದು.
* ರಾಷ್ಟ್ರೀಯ ಪಕ್ಷ ಮತ್ತು ಪ್ರಾಂತೀಯ ಪಕ್ಷ ಯಾವುವೆಂದು ತೀರ್ಮಾನಿಸುವುದು.
* ಚುನಾವಣೆಯನ್ನು ನಡೆಸಲು ಬೇಕಾದ ಸಿಬ್ಬಂದಿಯನ್ನು ನೀಡುವಂತೆ ಸರ್ಕಾರವನ್ನು ಕೇಳಿಕೊಳ್ಳುವುದು.
* ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಮುಖ್ಯ ಚುನಾವಣಾ ಅಧಿಕಾರಿ ನೇಮಕಾತಿಗೆ ಸಂಬಂಧಿಸಿದಂತೆ ಹೆಸರನ್ನು ಸೂಚಿಸುವ ಅಧಿಕಾರ.
* ಚುನಾವಣೆ ಘೋಷಿಸುವುದು, ಅಧಿಸೂಚನೆ ಹೊರಡಿಸುವುದು ಮತ್ತು ಚುನಾವಣಾ ದಿನಾಂಕವನ್ನು ಗೊತ್ತುಪಡಿಸುವುದು.
* ಚುನಾವಣೆಗಳಲ್ಲಿ ಅವ್ಯವಹಾರಗಳು ನಡೆದಲ್ಲಿ ಚುನಾವಣೆಯನ್ನು ರದ್ದುಪಡಿಸುವ ಅಧಿಕಾರ
* ಚುನಾವಣಾ ನೀತಿಸಂಹಿತೆಗಳನ್ನು ರೂಪಿಸಿ ಜಾರಿಗೊಳಿಸುವ ಅಧಿಕಾರ.
* ಚುನಾವಣಾ ಪ್ರಾಂತ್ಯಗಳ ವಿಂಗಡಣಾ ಕಾರ್ಯ.ಇತ್ಯಾದಿ.

**8. ವಿದ್ಯುನ್ಮಾನ ಮತಯಂತ್ರದಿಂದಾಗುವ ಲಾಭಗಳನ್ನು ವಿವರಿಸಿ.**

ವಿದ್ಯುನ್ಮಾನ ಮತಯಂತ್ರವನ್ನು ನಮ್ಮ ಭಾರತದಲ್ಲಿ ಪ್ರಪ್ರಥಮ ಬಾರಿಗೆ 1998 ರಲ್ಲಿ ಮತಪತ್ರ ಮತ್ತು ಮತಪೆಟ್ಟಿಗೆಗೆ ಬದಲಾಗಿ ಬಳಸಲಾಯಿತು.ಇದರ ಲಾಭಗಳೆಂದರೆ,

1. ಸಮಯದ ಉಳಿತಾಯ
2. ಸುಲಭ ಮತದಾನ
3. ಮಿತವ್ಯಯವಾದುದು
4. ಪರಿಸರ ಸಂರಕ್ಷಣೆ
5. ಶೀಘ್ರ ಮತ್ತು ಸ್ಪಷ್ಟ ಫಲಿತಾಂಶ
6. ಮತಎಣಿಕೆ ಕಾರ್ಯಕ್ಕೆ ಹೆಚ್ಚು ಸಿಬ್ಬಂದಿ ಅನಗತ್ಯ
7. ತಿರಸ್ಕೃತ ಮತಗಳನ್ನು ತಡೆಗಟ್ಟಬಹುದು.

**9. ಪಕ್ಷಾಂತರ ನಿಷೇಧ ಕಾಯ್ದೆಯ ಬಗ್ಗೆ ಬರೆಯಿರಿ.**

ಪಕ್ಷಾಂತರವನ್ನು ತಡೆಗಟ್ಟಲು ಜಾರಿಗೆ ತಂದ ಕಾಯ್ದೆಯೇ ಪಕ್ಷಾಂತರ ನಿಷೇಧ ಕಾಯ್ದೆ. ಈ ಕಾಯ್ದೆಯನ್ನು 1985 ರಲ್ಲಿ ಆಗಿನ ಪ್ರಧಾನಿ ದಿ.ರಾಜೀವ್‌ಗಾಂಧಿರವರು ಸಂವಿಧಾನದ 52ನೇ ತಿದ್ದುಪಡಿ ಮೂಲಕ ಜಾರಿಗೆ ತಂದರು. ಈ ಕಾಯ್ದೆಗೆ 2003ರಲ್ಲಿ ಸಂವಿಧಾನದ 91ನೇ ತಿದ್ದುಪಡಿ ಮೂಲಕ ಕೆಲವು ಬದಲಾವಣೆಗಳನ್ನೂ ಮಾಡಲಾಗಿದೆ.

ಈ ಕಾಯ್ದೆಯ ಮುಖ್ಯಾಂಶಗಳೆಂದರೆ,

* ಕೇಂದ್ರ/ರಾಜ್ಯ ಶಾಸನಾ ಸಭಾಸದಸ್ಯರು ತಾವು ಆಯ್ಕೆಯಾಗಿ ಬಂದ ಪಕ್ಷವನ್ನು ಸ್ವಇಚ್ಛೆಯಿಂದ ತ್ಯಜಿಸಿದರೆ ತಮ್ಮ ಸದಸ್ಯತ್ವವನ್ನು ಕಳೆದುಕೊಳ್ಳುತ್ತಾರೆ.
* ಸದನದಲ್ಲಿ ಮತದಾನ ನಡೆಯುವಾಗ ತಮ್ಮ ಪಕ್ಷದ ವಿಪ್‌ನ್ನು ಉಲ್ಲಂಘಿಸಿ ಮತಚಲಾಯಿಸಿದರೆ ಸದಸ್ಯತ್ವ ಕಳೆದುಕೊಳ್ಳುತ್ತಾರೆ.
* ಅಧಿವೇಶನದ ಸಮಯದಲ್ಲಿ ಶಾಸನಸಭಾ ಸದಸ್ಯರು ಸದನದಲ್ಲಿ ತಮ್ಮ ಪಕ್ಷದ ಅನುಮತಿ ಇಲ್ಲದೆ ಮತ ಚಲಾಯಿಸಿದಾಗ ಸದಸ್ಯತ್ವ ಕಳೆದುಕೊಳ್ಳುತ್ತಾರೆ.
* ಕೇಂದ್ರ/ರಾಜ್ಯಶಾಸಕಾಂಗಕ್ಕೆ ನಾಮಕರಣಗೊಂಡ ಶಾಸಕರು ನಾಮಕರಣಗೊಂಡ 6 ತಿಂಗಳ ನಂತರ ಬೇರೆ ಪಕ್ಷ ಸೇರಿದರೆ ಸದಸ್ಯತ್ವ ಕಳೆದುಕೊಳ್ಳುತ್ತಾರೆ.
* ಯಾವುದೇ ಪಕ್ಷದ 1/3 ಕ್ಕಿಂತ ಹೆಚ್ಚಿನ ಸದಸ್ಯರು ಪಕ್ಷವನ್ನು ತ್ಯಜಿಸಿದರೂ ಅದು ಪಕ್ಷಾಂತರವಾಗುತ್ತದೆ.
* ಈ ಕಾಯ್ದೆಯ ಅನ್ವಯ ಅನರ್ಹಗೊಂಡ ವ್ಯಕ್ತಿಗಳು ಯಾವುದೇ ಲಾಭದಾಯಕ ಹುದ್ದೆ ಹೊಂದುವಂತಿಲ್ಲ.
* ಸದಸ್ಯರನ್ನು ಅನರ್ಹಗೊಳಿಸುವ ಅಧಿಕಾರ ಸಭಾಪತಿಯವರಿಗಿದೆ.
* ಈ ಕಾಯ್ದೆಯನ್ನು ಜಾರಿಗೆ ತರಲು ನಿಯಮಗಳನ್ನು ರೂಪಿಸುವ ಅಧಿಕಾರ ಸಭಾಪತಿಯವರಿಗಿರುತ್ತದೆ.
* ಈ ಕಾಯ್ದೆ ಮಂತ್ರಿಮಂಡಲದ ಗಾತ್ರವನ್ನು ನಿರ್ಧರಿಸುತ್ತದೆ. ಇತ್ಯಾದಿ.

  ಈ ಪಕ್ಷಾಂತರ ನಿಷೇಧ ಕಾಯ್ದೆಯು ಇನ್ನೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಮತ್ತೆ ಕೆಲವು ಸುಧಾರಣೆಗಳ ಅಗತ್ಯತೆ ಇದೆ.

**10. ನಾಗರಿಕ ಸೇವಾ ವರ್ಗದ ಪ್ರಮುಖ ಲಕ್ಷಣಗಳನ್ನು ವಿವರಿಸಿ.**

ಸರ್ಕಾರಿ ನೌಕರರ ಸಮೂಹವೇ ನಾಗರಿಕ ಸೇವಾ ವರ್ಗ. ಇದು ಶಾಶ್ವತ ಕಾರ್ಯಾಂಗವಾಗಿದ್ದು, ವಿಲ್ಲೋಭಿರವರು ಇದನ್ನು ಸರ್ಕಾರದ 4ನೇ ಅಂಗ ಎಂದಿದ್ದಾರೆ. ಇದರ ಪ್ರಮುಖ ಲಕ್ಷಣಗಳೆಂದರೆ,

* ವೃತ್ತಿ ನಿರತ ವರ್ಗ * ಅಧಿಕಾರ ಶ್ರೇಣಿ ಪದ್ಧತಿ
* ಖಾಯಂ ಆಡಳಿತ * ರಾಜಕೀಯ ತಾಟಸ್ಥ್ಯ
* ಅನಾಮಧೇಯತ್ವ * ನಿಷ್ಪಕ್ಷಪಾತತೆ
* ಕಾನೂನಿನ ಚೌಕಟ್ಟು * ಸೇವಾಮನೋಭಾವ
* ವಿಶೇಷ ತರಬೇತಿ * ಶೈಕ್ಷಣಿಕ ಅರ್ಹತೆ
* ಸಾರ್ವಜನಿಕ ಹೊಣೆಗಾರಿಕೆ.

**11. ಮುಖ್ಯ ಕಾರ್ಯದರ್ಶಿಯ ಕಾರ್ಯದ ಬಗ್ಗೆ ಟಿಪ್ಪಣಿ ಬರೆಯಿರಿ.**

ಮುಖ್ಯ ಕಾರ್ಯದರ್ಶಿಯು ರಾಜ್ಯಸರ್ಕಾರದ ಸಚಿವಾಲಯದ ಆಡಳಿತಾತ್ಮಕ ಮುಖ್ಯಸ್ಥರಾಗಿ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತಾರೆ.

* ಮುಖ್ಯಮಂತ್ರಿಗಳಿಗೆ ಸಲಹೆ ನೀಡುವ ಅಧಿಕಾರ
* ಸಚಿವಾಲಯದ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣಾ ಕಾರ್ಯ.
* ಸಚಿವಾಲಯದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಕಾರ್ಯಗಳ ಮೇಲ್ವಿಚಾರಣಾ ಕಾರ್ಯ.
* ಕೆಲವು ಇಲಾಖೆಗಳ ಮುಖ್ಯಸ್ಥರಾಗಿ ಕಾರ್ಯ ನಿರ್ವಹಣೆ.
* ಸಚಿವರುಗಳಿಗೆ ಒದಗಿಸಿರುವ ಸಿಬ್ಬಂದಿಗಳ ಮೇಲೆ ಸಂಪೂರ್ಣ ನಿಯಂತ್ರಣ.
* ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಇತರೆ ರಾಜ್ಯಸರ್ಕಾರಗಳ ನಡುವೆ ಸಂಪರ್ಕಸೇತುವೆಯಾಗಿ ಕಾರ್ಯ ನಿರ್ವಹಣೆ.
* ಭಾರತ ಸರ್ಕಾರದಿಂದ ಪ್ರಮುಖ ಮತ್ತು ರಹಸ್ಯವಾದ ಮಾಹಿತಿಗಳನ್ನು ಪಡೆದುಕೊಂಡು ಮುಖ್ಯಮಂತ್ರಿಗೆ ತಲುಪಿಸುತ್ತಾರೆ.
* ಇವರು ಎಲ್ಲಾ ಕಾರ್ಯದರ್ಶಿಗಳ ಮುಖ್ಯಸ್ಥರಾಗಿದ್ದು ಅಪಾರ ಸಂಖ್ಯೆಯ ಸಮಿತಿಗಳ ಸದಸ್ಯರಾಗಿರುತ್ತಾರೆ.

**12. ಜಿಲ್ಲಾಧಿಕಾರಿಗಳ ಕಾರ್ಯಗಳನ್ನು ವಿವರಿಸಿ.**

ಜಿಲ್ಲಾಡಳಿತವು ರಾಜ್ಯದ ಪ್ರಾಥಮಿಕ ಆಡಳಿತಾತ್ಮಕ ಘಟಕವಾಗಿದ್ದು, ರಾಜ್ಯ ಸರ್ಕಾರದ ಪ್ರತಿನಿಧಿಯಾಗಿದ್ದ ಜಿಲ್ಲಾಧಿಕಾರಿಯವರು ಜಿಲ್ಲಾಡಳಿತದ ಮುಖ್ಯಸ್ಥರಾಗಿ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತಾರೆ.

1. ಕಾನೂನು ಸುವ್ಯವಸ್ಥೆ ಕಾಪಾಡುವುದು
2. ನಿಯಂತ್ರಣ ಕಾರ್ಯಗಳು
3. ಚುನಾವಣಾ ಕಾರ್ಯಗಳು
4. ಗಣತಿ ಕಾರ್ಯಗಳು
5. ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ಕಾರ್ಯಗಳು
6. ಕಂದಾಯ ಕಾರ್ಯಗಳು
7. ಅಭಿವೃದ್ಧಿ ಕಾರ್ಯಗಳು
8. ಪೌರಾಡಳಿತ ಕಾರ್ಯಗಳು
9. ವಿಪತ್ತು ನಿವಾರಣಾ ಕಾರ್ಯ
10. ಭೂಸ್ವಾಧೀನ ಕಾರ್ಯ

ಈ ರೀತಿ ಜಿಲ್ಲಾಧಿಕಾರಿಗಳು ಶಿಕ್ಷಣ, ಆರೋಗ್ಯ, ಪೊಲೀಸ್, ಖಜಾನೆ, ಅಬಕಾರಿ, ನಾಗರೀಕ ಸರಬರಾಜು ಸೇರಿದಂತೆ ಎಲ್ಲಾ ಇಲಾಖೆಗಳ ಉಸ್ತುವಾರಿಯನ್ನು ನಿರ್ವಹಿಸುತ್ತಾರೆ.

**13. ಅಂತರರಾಷ್ಟ್ರೀಯ ಸಂಬಂಧಗಳ ಪ್ರಾಮುಖ್ಯತೆಯನ್ನು ತಿಳಿಸಿ.**

ಆಧುನಿಕ ಯುಗದಲ್ಲಿ ಮಾನವನ ಬಾಳಿನ ಭದ್ರತೆ, ಕಲ್ಯಾಣ, ಅಷ್ಟೇ ಏಕೆ ಅವನ ಜೀವನವೂ ಕೂಡ ಅಂತರರಾಷ್ಟ್ರೀಯ ಸ್ಥಿತಿಯನ್ನು ಅವಲಂಬಿಸಿರುವುದರಿಂದ ಅಂತರರಾಷ್ಟ್ರಿಯ ಸಂಬಂಧಗಳ ಪ್ರಾಮುಖ್ಯತೆ ಈ ಕೆಳಗಿನಂತೆ ಹೆಚ್ಚಿದೆ.

* ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನದಿಂದ ರಾಷ್ಟ್ರಗಳ ಮೂಲನೀತಿ, ನಿಯಮಗಳು, ತತ್ವಗಳು, ಉದ್ದೇಶಗಳು, ಸಾಧನೆ ಮತ್ತು ವೈಫಲ್ಯಗಳ ಬಗ್ಗೆ ತಿಳಿಯಬಹುದು.

* ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಕಂಡುಕೊಳ್ಳಬಹುದು.
* ಇದು ಸಂಕುಚಿತ ರಾಷ್ಟ್ರೀಯ ಭಾವನೆಯನ್ನು ಹೋಗಲಾಡಿಸಿ,ಅಂತರರಾಷ್ಟ್ರೀಯ ಮನೋಭಾವವನ್ನು ವೃದ್ಧಿಸುತ್ತದೆ.
* ಇದು ಯುದ್ಧ ಮತ್ತು ಮಿಲಿಟರಿ ಕಾರ್ಯಾಚರಣೆಯನ್ನು ತಡೆಗಟ್ಟಲು ಹಾಗೂ ಮೈತ್ರಿಕೂಟಗಳ ರಚನೆಗೆ ಸಹಾಯಕವಾಗಿದೆ.
* ಇದು ಸಾಮೂಹಿಕ ಭದ್ರತೆಯ ತತ್ವಗಳು, ನಿಶಸ್ತ್ರೀಕರಣ, ವಿಶ್ವದ ಪ್ರಗತಿ ಮತ್ತು ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳಲು ಉತ್ತೇಜಿಸುತ್ತದೆ.
* ಇದು ವಿಶ್ವ ನಾಗರಿಕರಲ್ಲಿ ಜಾಗತಿಕ ಭಾವನೆ, ವಿಶ್ವಭ್ರಾತೃತ್ವ ಮತ್ತು ರಾಷ್ಟ್ರೀಯ ಏಕತೆಯನ್ನು ಬೆಳೆಸುತ್ತದೆ.

**14. ದಲಿತ ಚಳುವಳಿಗೆ ಕಾರಣಗಳನ್ನು ವಿವರಿಸಿ.**

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಶೋಷಿತರಾದವರೇ ದಲಿತರು. ಈ ದಲಿತ ವರ್ಗದವರು ಮೇಲ್ವರ್ಗದವರಿಂದ ತಮಗಾಗಿದ್ದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಅಸಮಾನತೆ, ಶೋಷಣೆ, ತಾರತಮ್ಯ ಹಾಗೂ ದೌರ್ಜನ್ಯದ ವಿರುದ್ಧ ನಡೆಸಿದ ಸಂಘಟಿತ ಹೋರಾಟವೇ ದಲಿತ ಚಳುವಳಿ.ಈ ಚಳುವಳಿಯ ಕಾರಣಗಳೆಂದರೆ,

1. ಸಾಮಾಜಿಕ ಅಸಮಾನತೆ
2. ಆರ್ಥಿಕ ಅಸಮಾನತೆ
3. ರಾಜಕೀಯ ಅಸಮಾನತೆ
4. ತಾರತಮ್ಯ
5. ಅರಿವಿನ ಕೊರತೆ

**15. ಕಾರ್ಮಿಕ ಚಳುವಳಿಯ ಕಾರಣಗಳಾವುವು?**

ಕೃಷಿ ಮತ್ತು ಕೈಗಾರಿಕೆಗಳಲ್ಲಿ ತಮ್ಮ ದೈಹಿಕ ಶ್ರಮದ ಮೂಲಕ ಕೆಲಸ ಮಾಡುವ ವರ್ಗವೇ ಕಾರ್ಮಿಕ ವರ್ಗ. ಈ ಕಾರ್ಮಿಕ ವರ್ಗವು ಮಾಲಿಕರಿಂದ ತಮಗಾಗುತ್ತಿದ್ದ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ ಮತ್ತು ಅನ್ಯಾಯಗಳ ವಿರುದ್ದ ನಡೆಸಿದ ಸಂಘಟಿತ ಹೋರಾಟವೇ ಕಾರ್ಮಿಕ ಚಳುವಳಿ. ಈ ಚಳುವಳಿಗೆ ಕಾರಣಗಳೆಂದರೆ,

1. ಕಾರ್ಮಿಕರ ಹಿತಾಶಕ್ತಿ ನಿರ್ಲಕ್ಷ್ಯ
2. ಉದ್ಯೋಗಿಗಳ ಕಡೆಗಣನೆ
3. ಸೌಲಭ್ಯಗಳಿಂದ ವಂಚನೆ
4. ಕಲ್ಯಾಣ ಕಾರ್ಯಕ್ರಮಗಳು
5. ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿಗತಿ.

**16. ಖಾಸಗೀಕರಣದ ಪ್ರಾಮುಖ್ಯತೆ ಮತ್ತು ರಾಜಕೀಯ ಪರಿಣಾಮಗಳನ್ನು ವಿವರಿಸಿ.**

ಸರ್ಕಾರಿ ಒಡೆತನದಲ್ಲಿರುವ ಕೈಗಾರಿಕೆಗಳನ್ನು ಖಾಸಗಿ ಸಂಸ್ಥೆಗಳಿಗೆ ವರ್ಗಾಯಿಸುವುದೇ ಖಾಸಗೀಕರಣ.

**ಪ್ರಾಮುಖ್ಯತೆ;–**

* ಹೊಸ ಉದ್ಯಮಗಳನ್ನು ಪ್ರೋತ್ಸಾಹಿಸುತ್ತದೆ
* ಕಾರ್ಯದಕ್ಷತೆ * ಸಾಮರ್ಥ್ಯ ಹೆಚ್ಚಿಸುತ್ತದೆ
* ವಿನೂತನ ಯೋಜನೆ * ಗುರಿ
* ಬಂಡವಾಳ * ಏಕಸ್ವಾಮ್ಯ

**ರಾಜಕೀಯ ಪರಿಣಾಮಗಳು;–**

* ಸಂಪತ್ತಿನ ಕೇಂದ್ರೀಕರಣ
* ಅಧಿಕ ಲಾಭ
* ಸ್ಥಳೀಯ ಕೈಗಾರಿಕೆಗಳ ನಾಶ
* ರಾಷ್ಟ್ರೀಯ ಹಿತಾಶಕ್ತಿಗೆ ಧಕ್ಕೆ
* ಸಾರ್ವಭೌಮತ್ವಕ್ಕೆ ಧಕ್ಕೆ
* ಉದ್ಯೋಗ ಭದ್ರತೆ ಇಲ್ಲ
* ಸೇವಾಮನೋಭಾವ ಇಲ್ಲ

**17. ಉದಾರೀಕರಣದ ಪ್ರಾಮುಖ್ಯತೆ ಮತ್ತು ರಾಜಕೀಯ ಪರಿಣಾಮಗಳನ್ನು ವಿವರಿಸಿ.**

ಆರ್ಥಿಕವಾಗಿ ಅನೇಕ ನಿಬಂಧನೆಗಳಿಂದ ಮುಕ್ತಗೊಳಿಸುವ ಪದ್ಧತಿಯೇ ಉದಾರೀಕರಣ.

**ಪ್ರಾಮುಖ್ಯತೆ;–**

* ಸರ್ಕಾರದ ನೀತಿಗಳಿಂದ ಮುಕ್ತಿ
* ಗ್ರಾಹಕಸ್ನೇಹಿ
* ಪೈಪೋಟಿಯನ್ನು ಉತ್ತೇಜಿಸುತ್ತದೆ.
* ವಿಶ್ವ ಉದ್ಯಮಿಗಳ ದರ್ಜೆಯನ್ನು ಉತ್ತೇಜಿಸುತ್ತದೆ
* ಖಾಸಗಿ ಸಂಸ್ಥೆಗಳನ್ನು ಉನ್ನತೀಕರಿಸುತ್ತದೆ
* ತಂತ್ರಜ್ಞಾನವನ್ನು ಉನ್ನತೀಕರಿಸುತ್ತದೆ
* ಆರ್ಥಿಕ ಪ್ರಗತಿ ಸಾಧಿಸುತ್ತದೆ.

**ರಾಜಕೀಯ ಪರಿಣಾಮಗಳು;–**

* ಭೌದ್ಧಿಕಪಲಾಯನ
* ಕಾರ್ಮಿಕರ ಅವಲಂಬನೆ ಕಡಿಮೆಯಾಗುತ್ತದೆ
* ಪರಿಸರ ವಿನಾಶ ಹೆಚ್ಚಾಗುತ್ತದೆ
* ಕೆಲವು ವಸ್ತುಗಳ ಬೆಲೆಗಳ ನಿಯಂತ್ರ
* ಜನಸಾಮಾನ್ಯರ ಮೇಲೆ ದುಷ್ಪರಿಣಾಮ
* ಹಣಕಾಸಿನ ಅಸ್ಥಿರತೆ

**18. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯನ್ನು ಕುರಿತು ಬರೆಯಿರಿ.**

ಭದ್ರತಾ ಮಂಡಳಿಯು ವಿಶ್ವಸಂಸ್ಥೆಯ ಎರಡನೇ ಪ್ರಮುಖ ಮತ್ತು ಹೆಚ್ಚಿನ ಅಧಿಕಾರ ಪಡೆದಿರುವ ಅಂಗವಾಗಿದೆ. ಇದನ್ನು **"ವಿಶ್ವ ಕಾರ್ಯಾಂಗ"** ಎನ್ನುವರು. ವಿಶ್ವದ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ಇದರ ಪ್ರಮುಖ ಜವಾಬ್ದಾರಿಯಾಗಿದೆ. ಇದು ಅಂತರರಾಷ್ಟ್ರೀಯ ವಿಚಾರಗಳನ್ನು ಚರ್ಚಿಸುವ, ಪರಿಶೀಲಿಸುವ ಮತ್ತು ಶಿಫಾರಸ್ಸು ಮಾಡುವ ಅಧಿಕಾರವನ್ನು ಹೊಂದಿದೆ. ಹಾಗೆಯೇ ವಿಶ್ವಸಂಸ್ಥೆಗೆ ಯಾವ ಸೂಕ್ತ ವ್ಯಕ್ತಿಯನ್ನು ಮಹಾ ಕಾರ್ಯದರ್ಶಿಯನ್ನಾಗಿ ನೇಮಕಮಾಡಬೇಕೆಂದು ಸಾಮಾನ್ಯ ಸಭೆಗೆ ಶಿಫಾರಸ್ಸು ಮಾಡುತ್ತದೆ. ಇದು 5 ಖಾಯಂ ಸದಸ್ಯ ರಾಷ್ಟ್ರಗಳನ್ನು ಮತ್ತು 10 ಖಾಯಂ ಅಲ್ಲದ ಸದಸ್ಯ ರಾಷ್ಟ್ರಗಳನ್ನು ಹೊಂದಿದೆ. 10 ಖಾಯಂ ಅಲ್ಲದ ಸದಸ್ಯ ರಾಷ್ಟ್ರಗಳನ್ನು ಸಾಮಾನ್ಯ ಸಭೆಯು 2 ವರ್ಷಗಳ ಅವಧಿಗೆ ನೇಮಕ ಮಾಡುತ್ತದೆ. 5 ಖಾಯಂ ರಾಷ್ಟ್ರಗಳೆಂದರೆ, ಫ್ರಾನ್ಸ್,

ಅಮೇರಿಕಾ, ಚೈನಾ, ಇಂಗ್ಲೆಂಡ್ ಮತ್ತು ರಷ್ಯಾ (FACER). ಇವು "ವೀಟೋ" ಅಧಿಕಾರವನ್ನು ಹೊಂದಿವೆ.

**19. ಲಿಂಗಾಧಾರಿತ ಅಸಮಾನತೆಗೆ ಕಾರಣಗಳನ್ನು ತಿಳಿಸಿ.**

ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡುವುದೇ ಲಿಂಗಾಧಾರಿತ ತಾರತಮ್ಯವಾಗಿದೆ. ಈ ತಾರತಮ್ಯಕ್ಕೆ ಕಾರಣಗಳೆಂದರೆ,

1. ಮನುಸ್ಮೃತಿ
2. ಪುರುಷಪ್ರಾಬಲ್ಯ
3. ಶಿಕ್ಷಣದ ನಿರಾಕರಣೆ
4. ಸೂಕ್ತ ಪ್ರಾತಿನಿಧ್ಯ ನೀಡದಿರುವುದು
5. ವರದಕ್ಷಿಣೆ ಪದ್ಧತಿ.

**20. ಜಾತಿ ಆಧಾರಿತ ಅಸಮಾನತೆಗೆ ಕಾರಣಗಳಾವುವು?**

ಜಾತಿ ಆಧಾರದ ಮೇಲೆ ತಾರತಮ್ಯ ಮಾಡುವುದೇ ಜಾತಿ ಆಧಾರಿತ ತಾರತಮ್ಯವಾಗಿದೆ. ಈ ತಾರತಮ್ಯಕ್ಕೆ ಕಾರಣಗಳೆಂದರೆ,

1. ವರ್ಣಾಶ್ರಮ ವ್ಯವಸ್ಥೆ
2. ಸಾಮಾಜಿಕ ಅಂತರ
3. ಅನಕ್ಷರತೆ ಮತ್ತು ಸಂಪ್ರದಾಯ
4. ಮೇಲರಿಮೆ
5. ವೈವಾಹಿಕ ನಿರ್ಬಂಧಗಳು

**21. ಮಹಿಳಾ ಚಳುವಳಿಗೆ ಕಾರಣಗಳಾವುವು?**

ಮಹಿಳೆಯರು ತಮಗಾಗುತ್ತಿದ್ದ ಅನ್ಯಾಯ, ದೌರ್ಜನ್ಯ, ಅತ್ಯಾಚಾರ, ದಬ್ಬಾಳಿಕೆ ಮತ್ತು ಅಸಮಾನತೆಗಳ ವಿರುದ್ಧ ನಡೆಸಿದ ಸಂಘಟಿತ ಹೋರಾಟವೇ ಮಹಿಳಾ ಚಳುವಳಿಯಾಗಿದೆ.ಈ ಚಳುವಳಿಗೆ ಕಾರಣಗಳೆಂದರೆ,

1. ಅಸಮಾನತೆ
2. ವರದಕ್ಷಿಣೆ ಪಿಡುಗು
3. ಮಾನವ ಹಕ್ಕುಗಳ ಉಲ್ಲಂಘನೆ
4. ಪುರುಷ ಪ್ರಧಾನ ವ್ಯವಸ್ಥೆ
5. ಲೈಂಗಿಕ ಹಿಂಸಾಚಾರ
6. ಕೌಟುಂಬಿಕ ಹಿಂಸೆ.

**22. ಅಖಿಲ ಭಾರತ ಸೇವೆಗಳ ಬಗ್ಗೆ ಬರೆಯಿರಿ.**

ಭಾರತದುದ್ದಕ್ಕೂ ವಿಸ್ತರಿಸಿರುವ ಸೇವೆಗಳೇ ಅಖಿಲ ಭಾರತ ಸೇವೆಗಳು ಅಂದರೆ ಅಖಿಲ ಭಾರತ ಸೇವೆಗಳು ಕೇಂದ್ರ ಹಾಗೂ ರಾಜ್ಯಸರ್ಕಾರಗಳ ಎರಡಕ್ಕೂ ಸಾಮಾನ್ಯ ಸೇವೆಗಳಾಗಿದ್ದು, ಈ ಸೇವಾ ವರ್ಗದ ಅಧಿಕಾರಿಗಳು ಕೇಂದ್ರ ಹಾಗೂ ರಾಜ್ಯಸರ್ಕಾರ ಎರಡರಲ್ಲೂ ಸೇವೆ ಸಲ್ಲಿಸುತ್ತಾರೆ.

**ಉದಾಹರಣೆ;–**

* ಭಾರತೀಯ ಆಡಳಿತ ಸೇವೆ (IAS)
* ಭಾರತೀಯ ಪೊಲೀಸ್‌ಸೇವೆ (IPS)
* ಭಾರತೀಯ ಅರಣ್ಯ ಸೇವೆ (IFS)

ಸಂವಿಧಾನದ 312ನೇ ವಿಧಿಯು ಅಖಿಲ ಭಾರತ ಸೇವೆಗಳಿಗೆ ಅವಕಾಶ ನೀಡಿದೆ.ಹಾಗೆಯೇ ಈ ವಿಧಿಯು ಅಖಿಲ ಭಾರತ ಸೇವೆಗಳನ್ನು ಸೃಷ್ಟಿಸುವ ಅಧಿಕಾರವನ್ನು ಸಂಸತ್‌ಗೆ ನೀಡಿದೆ. ಈ ಅಧಿಕಾರಿಗಳನ್ನು ಕೇಂದ್ರ ಲೋಕಸೇವಾ ಆಯೋಗವು ಸ್ಪರ್ಧಾತ್ಮ ಪರೀಕ್ಷೆಗಳ ಮೂಲಕ ನೇಮಕ ಮಾಡಿ ಅವರಿಗೆ ತರಬೇತಿ ನೀಡುತ್ತದೆ.

**23. ಕೇಂದ್ರ ಸೇವೆಗಳ ಬಗ್ಗೆ ಬರೆಯಿರಿ.**

ಕೇಂದ್ರಮಟ್ಟದಲ್ಲಿ ಸ್ಥಾಪಿತವಾಗಿರುವ ಸೇವೆಗಳೇ ಕೇಂದ್ರ ಸೇವೆಗಳು. ಈ ಸೇವೆಗಳನ್ನು ಕೇಂದ್ರಪಟ್ಟಿಯಲ್ಲಿ ಬರುವ ವಿಷಯಗಳ ಮೇಲೆ ಸೇವೆ ಸಲ್ಲಿಸಲು ಸೃಷ್ಟಿಸಲಾಗಿದೆ.ಈ ಸೇವೆಗಳ ರಚನೆಗೆ ಸಂವಿಧಾನದ 312ನೇ ವಿಧಿ ಅವಕಾಶ ನೀಡಿದೆ. ಹಾಗೆಯೇ ಈ ವಿಧಿಯು ಕೇಂದ್ರ ಸೇವೆಗಳನ್ನು ಸೃಷ್ಟಿಸಲು ಸಂಸತ್ತಿಗೆ ಅಧಿಕಾರವನ್ನು ನೀಡಿದೆ. ಅಂತಹ ಸೇವೆಗಳೆಂದರೆ.

* ಭಾರತೀಯ ರೈಲ್ವೆ ಸೇವೆ
* ಭಾರತೀಯ ಅಂಚೆಸೇವೆ
* ಭಾರತೀಯ ವಿದೇಶಿ ಸೇವೆ ಇತ್ಯಾದಿ

ಕೇಂದ್ರ ಸೇವೆಯ ಅಧಿಕಾರಿಗಳು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಾರೆ.ಇವರನ್ನು ಸಂಬಂಧಪಟ್ಟ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು ನಿಯಂತ್ರಿಸುತ್ತವೆ.ಇವರನ್ನು ಕೇಂದ್ರ ಲೋಕಸೇವಾ ಆಯೋಗವು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡುತ್ತದೆ. ಈ ಕೇಂದ್ರ ಸೇವೆಗಳನ್ನು ದರ್ಜೆ–1, ದರ್ಜೆ–2, ದರ್ಜೆ–3 ಮತ್ತು ದರ್ಜೆ–4 ಎಂದು ವರ್ಗೀಕರಿಸಲಾಗಿದೆ. ದರ್ಜೆ–1 ಮತ್ತು ದರ್ಜೆ–2ರ ಹುದ್ದೆಗಳನ್ನು ಪತ್ರಾಂಕಿತ ಹುದ್ದೆಗಳೆಂದು, ದರ್ಜೆ–3 ಮತ್ತು ದರ್ಜೆ–4ರ ಹುದ್ದೆಗಳನ್ನು ಪತ್ರಾಂಕಿತವಲ್ಲದ ಹುದ್ದೆಗಳೆಂದು ಕರೆಯುವರು.

**24. ಭಾರತ ಮತ್ತು ಸಾರ್ಕ್‌ನ ಸಹಕಾರ ಕ್ಷೇತ್ರಗಳನ್ನು ವಿವರಿಸಿ.**

1. ಸಾರ್ಕ್‌ನ ಪ್ರಾದೇಶಿಕ ಕೇಂದ್ರಗಳು.
2. ಸಾರ್ಕ್ ಅಭಿವೃದ್ಧಿ ನಿಧಿ (SDF)
3. ಆರ್ಥಿಕ ಸಹಕಾರ
4. ಶೈಕ್ಷಣಿಕ ಸಹಕಾರ
5. ಜನರು ಜನರಿಗಾಗಿ ಸಂಪರ್ಕ
6. ಭಯೋತ್ಪಾದನೆ

**25. ಭಾರತ ಮತ್ತು ಪಾಕಿಸ್ತಾನದ ನಡುವೆ ಕಾಶ್ಮೀರ ಸಮಸ್ಯೆಯನ್ನು ವಿವರಿಸಿ.**

ಭಾರತ ಮತ್ತು ಪಾಕಿಸ್ತಾನ ಸ್ವತಂತ್ರಪೂರ್ವ ಬ್ರಿಟೀಷ್ ಭಾರತದ ಭಾಗವಾಗಿದ್ದವು. ಬ್ರಿಟೀಷರ ಒಡೆದು ಆಳುವ ನೀತಿಯು ಈ ಉಭಯ ರಾಷ್ಟ್ರದ ರಚನೆಗೆ ಕಾರಣವಾಯಿತು. ಈ ಉಭಯ ರಾಷ್ಟ್ರಗಳ ನಡುವಣ ದ್ವೇಷಕ್ಕೆ 'ಕಾಶ್ಮೀರ ವಿವಾದ' ಪ್ರಮುಖ ಕಾರಣವಾಗಿದೆ. ಕಾಶ್ಮೀರದಲ್ಲಿನ ಬಹುಸಂಖ್ಯಾತ ಜನರು ಮುಸ್ಲಿಂರಾಗಿರುವುದು ಹಾಗೂ ಆ ಪ್ರದೇಶ ಪಾಕಿಸ್ತಾನಕ್ಕೆ ಹತ್ತಿರವಾಗಿರುವುದರಿಂದ, ಕಾಶ್ಮೀರ ಪ್ರದೇಶ ತಮಗೆ ಸೇರಬೇಕೆಂದು ಪಾಕಿಸ್ತಾನವು ಪದೇ ಪದೇ ದಾಳಿ ಮಾಡುವುದರೊಂದಿಗೆ ಆಂತರಿಕ ಭಯೋತ್ಪಾದಕ ಕೃತ್ಯಗಳಿಗೆ ಕುಮ್ಮಕ್ಕನ್ನು ನೀಡುತ್ತಿದೆ. ಪಾಕಿಸ್ತಾನದ ಈ ಮೊಂಡುತನಕ್ಕೆ

ಅಮೇರಿಕಾ, ಚೀನಾ ಮತ್ತು ಇಂಗ್ಲೆಂಡ್ ದೇಶಗಳು ಆಗಾಗ ಎಲ್ಲಾ ರೀತಿಯ ಸಹಾಯವನ್ನು ನೀಡುತ್ತಿರುವುದು ಪಾಕ್ ಮತ್ತು ಭಾರತದ ನಡುವಣ ಕಾಶ್ಮೀರ ಸಮಸ್ಯೆ ಜ್ವಲಂತ ಸಮಸ್ಯೆಯಾಗಿ ಉಳಿದಿರುವುದಕ್ಕೆ ಕಾರಣವಾಗಿದೆ. ಪಾಕಿಸ್ತಾನವು ಕಾಶ್ಮೀರ ಪ್ರದೇಶವನ್ನು ವಶಪಡಿಸಿಕೊಳ್ಳಲು 1947, 1965, 1971 ಮತ್ತು 1999 ರಲ್ಲಿ 4 ಭಾರಿ ದಾಳಿ ಮಾಡಿ, ಸೋಲನ್ನು ಅನುಭವಿಸಿತು. ಆದರೂ ಕೂಡ ಅದರ ಹೋರಾಟ ಕೊನೆಗೊಂಡಿಲ್ಲ.

ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಅನೇಕ ಶೃಂಗಸಭೆಗಳು, ಪ್ರಧಾನಿ, ವಿದೇಶಾಂಗ ಸಚಿವರು ಮತ್ತು ಉನ್ನತ ಅಧಿಕಾರಿಗಳ ಮಟ್ಟದ ಅನೇಕ ಸಭೆಗಳು ನಡೆದಿವೆ. ಆದರೂ ಈ ಉಭಯ ರಾಷ್ಟ್ರಗಳು ಈ ವಿವಾದವನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗಿಲ್ಲ. ಹಾಗೆಯೇ ವಿಶ್ವಸಂಸ್ಥೆಯ ಭದ್ರತಾಮಂಡಳಿಯು ಈ ಸಮಸ್ಯೆಗೆ ಪರಿಹಾರವನ್ನು ನೀಡಿಲ್ಲ.

## IV. ಹತ್ತು ಅಂಕದ ಪ್ರಶ್ನೆಗಳು
**(ಕೆಳಗಿನ ಪ್ರಶ್ನೆಗಳಿಗೆ 30-40 ವಾಕ್ಯಗಳಲ್ಲಿ ಉತ್ತರಿಸಿ)**

**1. 1935ರ ಭಾರತ ಸರ್ಕಾರ ಕಾಯ್ದೆಯನ್ನು ವಿವರಿಸಿ.**

1935ರ ಕಾಯ್ದೆಯು ಭಾರತದ ರಾಜಕೀಯ ಬದಲಾವಣೆಯಲ್ಲಿ ಹೊಸಯುಗವನ್ನು ಆರಂಭಿಸಿತು.ಈ ಕಾಯ್ದೆಯು 321 ವಿಧಿಗಳನ್ನು ಮತ್ತು 10 ಅನುಬಂಧಗಳನ್ನು ಒಳಗೊಂಡಿದ್ದು ಈ ಕೆಳಗಿನ ಮುಖ್ಯಾಂಶಗಳನ್ನು ಹೊಂದಿದೆ.

1. ಸಂಯುಕ್ತ ಪದ್ಧತಿ
2. ಅಧಿಕಾರ ವಿಭಜನೆ
   ಅ) ಕೇಂದ್ರ ಪಟ್ಟಿ
   ಆ) ಪ್ರಾಂತ್ಯಗಳ ಪಟ್ಟಿ
   ಇ) ಸಮವರ್ತಿಪಟ್ಟಿ
   ಈ) ಶೇಷಾಧಿಕಾರ
3. ದ್ವಿಸರ್ಕಾರ ಪದ್ಧತಿ
4. ದ್ವಿಸದನ ಶಾಸಕಾಂಗ ಪದ್ಧತಿ
   ಅ) ಫೆಡರಲ್ ಅಸೆಂಬ್ಲಿ (ಕೆಳಮನೆ)
   ಆ) ಕೌನ್ಸಿಲ್ ಆಫ್‌ಸ್ಟೇಟ್ (ಮೇಲ್ಮನೆ)
5. ಫೆಡರಲ್ ನ್ಯಾಯಾಲಯ ಸ್ಥಾಪನೆ.
6. ಪ್ರಾಂತೀಯ ಸ್ವಾಯತ್ತತೆ.
7. ಒಕ್ಕೂಟ ಲೋಕಸೇವಾ ಆಯೋಗ, ಪ್ರಾಂತೀಯ ಲೋಕಸೇವಾ ಆಯೋಗ ಮತ್ತು ಜಂಟಿ ಲೋಕಸೇವಾ ಆಯೋಗಗಳ ಸ್ಥಾಪನೆ
8. ರಿಜರ್ವ್‌ಬ್ಯಾಂಕ್ ಸ್ಥಾಪನೆ.
9. ಅಖಿಲ ಭಾರತ ಫೆಡರೇಷನ್ ರಚನೆ.

ಈ ರೀತಿ 1935ರ ಕಾಯ್ದೆಯು ಮುಖ್ಯಾಂಶಗಳನ್ನೊಳಗೊಂಡಿದ್ದು, ನಮ್ಮ ಭಾರತ ಸಂವಿಧಾನಕ್ಕೆ ಪ್ರಮುಖ ಮೂಲಾಧಾರವಾಗಿದೆ. ನಮ್ಮ ಸಂವಿಧಾನದ 3/4 ರಷ್ಟು ಅಂದರೆ ಸುಮಾರು 250 ವಿಧಿಗಳನ್ನು ಈ ಕಾಯ್ದೆಯಿಂದಲೇ ಪಡೆಯಲಾಗಿದೆ.ಹಾಗಾಗಿ ಈ ಕಾಯ್ದೆಯನ್ನು ಭಾರತ ಸಂವಿಧಾನದ **'ನೀಲ ನಕ್ಷೆ'** ಎನ್ನುವರು.

**2. ಭಾರತದ ಪಕ್ಷ ಪದ್ಧತಿಯ ಸ್ವರೂಪವನ್ನು ವಿವರಿಸಿ.**

ಸಾಮಾನ್ಯ ಸಿದ್ಧಾಂತದ ಆಧಾರದ ಮೇಲೆ ರಾಜಕೀಯ ಅಧಿಕಾರವನ್ನು ಪಡೆಯುವ ಉದ್ದೇಶದಿಂದ ಸಂಘಟಿತವಾಗಿರುವ ಜನಸಮುದಾಯವೇ ರಾಜಕೀಯಪಕ್ಷ. ಭಾರತದ ಪಕ್ಷ ಪದ್ಧತಿಯ ಸ್ವರೂಪ ಈ ಕೆಳಗಿನಂತಿದೆ.

1 ಸಂವಿಧಾನೇತರ ಬೆಳವಣಿಗೆ
2 ಬಹುಪಕ್ಷ ಪದ್ಧತಿ
3 ಪಕ್ಷಗಳಲ್ಲಿ ಒಡಕು ಮತ್ತು ವಿಲೀನ
4 ಏಕಪಕ್ಷ ಪ್ರಾಬಲ್ಯದ ಕ್ಷೀಣತೆ
5 ಭಿನ್ನಮತೀಯತೆ
6 ಪಕ್ಷಾಂತರ ಪಿಡುಗು
7 ನಾಯಕತ್ವದ ವರ್ಚಸ್ಸು
8. ತತ್ವರಹಿತ ರಾಜಕೀಯ ಪಕ್ಷಗಳು
9. ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯ
10. ಧಾರ್ಮಿಕ ಮತ್ತು ಭಾಷಾವಾರು ಪಕ್ಷಗಳು
11. ಎಡ ಮತ್ತು ಬಲಪಂಥೀಯ ಪಕ್ಷಗಳು
12. ಸಮ್ಮಿಶ್ರ ಸರ್ಕಾರದ ಶಕೆ.

ಈ ರೀತಿ ಭಾರತದ ರಾಜಕೀಯ ಪಕ್ಷಗಳು ತನ್ನದೇ ಆದ ಲಕ್ಷಣಗಳನ್ನು ಹೊಂದಿರುವುದರ ಮೂಲಕ ವಿಶ್ವದಲ್ಲೇ ಒಂದು ವಿಶಿಷ್ಟ ಸ್ವರೂಪವನ್ನು ಪಡೆದುಕೊಂಡಿದೆ.

**3. ಭಾರತದಲ್ಲಿ ಚುನಾವಣಾ ಸುಧಾರಣೆಗಳನ್ನು ವಿವರಿಸಿ.**

ದೇಶದ ಭವಿಷ್ಯವನ್ನು ನಿರ್ಣಯಗಳೊಸುವ ಚುನಾವಣಾಗಳನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ಉದ್ದೇಶದಿಂದ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ತರುವುದರ ಮೂಲಕ ಈ ಕೆಳಗಿನ ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ.

1. ಮತದಾರರ ಗುರುತಿನ ಚೀಟಿ (EPIC) – 1993
2. ವಿದ್ಯುನ್ಮಾನ ಮತಯಂತ್ರ (EVM) – 1998
3. ಅಭ್ಯರ್ಥಿಗಳ ಹಿನ್ನಲೆಯ ಕಡ್ಡಾಯ ಘೋಷಣೆ – 2003
   ಅ) ಶೈಕ್ಷಣಿಕ ವಿವರ
   ಆ) ಅಪರಾಧ ವಿವರ
   ಇ) ಆಸ್ತಿ ವಿವರ
4. ನಕಾರಾತ್ಮಕ ಮತದಾನ (NOTA) – 2014

ಇಷ್ಟೇ ಅಲ್ಲದೆ ಇನ್ನೂ ಅನೇಕ ಸುಧಾರಣೆಗಳನ್ನು ಜಾರಿಗೊಳಿಸಲಾಗಿದೆ ಹಾಗೆಯೇ ರಾಜ್ಯವೇ ಚುನಾವಣಾ ವೆಚ್ಚವನ್ನು ಭರಿಸುವ ಸುಧಾರಣೆಯನ್ನ ಜಾರಿಗೊಳಿಸುವ ಪ್ರಯತ್ನವು ನಡೆಯುತ್ತಿದೆ.

**4. ಭಾರತದ ರಾಜಕೀಯ ಪಕ್ಷಗಳ ಕಾರ್ಯಗಳನ್ನು ವಿವರಿಸಿ.**

ಭಾರತವು ವಿಶ್ವದ ಬೃಹತ್ ಪ್ರಜಾಸತ್ತಾತ್ಮಕ ರಾಷ್ಟ್ರವಾಗಿದ್ದು ಇಲ್ಲಿ ರಾಜಕೀಯ ಪಕ್ಷಗಳು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಜೀವನಾಡಿಯಾಗಿ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸುತ್ತವೆ.

1. ಚುನಾವಣಾ ಪ್ರನಾಳಿಕೆಯನ್ನು ಸಿದ್ಧಪಡಿಸುವುದು
2. ಅಭ್ಯರ್ಥಿಯ ಆಯ್ಕೆ
3. ರಾಜಕೀಯ ಶಿಕ್ಷಣ ಮತ್ತು ಅರಿವು
4. ಚುನಾವಣೆಗೆ ಸ್ಪರ್ಧಿಸುವುದು
5. ಸರ್ಕಾರದ ರಚನೆ ಮತ್ತು ನಿರ್ವಹಣೆ
6. ವಿರೋಧ ಪಕ್ಷವಾಗಿ ಕಾರ್ಯ ನಿರ್ವಹಣೆ
7. ಸಾರ್ವಜನಿಕಾಭಿಪ್ರಾಯವನ್ನು ರೂಪಿಸುವುದು
8. ಸರ್ಕಾರ ಮತ್ತು ಜನರ ನಡುವೆ ಸೇತುವೆ
9. ಸಾರ್ವಜನಿಕ ಹಿತಾಶಕ್ತಿ ರಕ್ಷಣೆ
10. ರಾಷ್ಟ್ರೀಯ ಹಿತಾಶಕ್ತಿ ರಕ್ಷಣೆ

**5. ರಾಷ್ಟ್ರನಿರ್ಮಾಣದ ಅಗತ್ಯಾಂಶಗಳು, ತೊಡಕುಗಳು ಮತ್ತು ಪರಿಹಾರೋಪಾಯಗಳನ್ನು ವಿವರಿಸಿ.**

ಜನರನ್ನು ಸಂಘಟಿಸಿ, ಅವರಲ್ಲಿ ಸಾಮರಸ್ಯ ಮೂಡಿಸಿ, ಎಲ್ಲರೂ ಒಪ್ಪಿಕೊಳ್ಳುವ ವ್ಯವಸ್ಥೆಯನ್ನು ನಿರ್ಮಿಸುವ ವಿಶಾಲ ಪ್ರಕ್ರಿಯೆಯೇ ರಾಷ್ಟ್ರನಿರ್ಮಾಣ. ರಾಷ್ಟ್ರ–ರಾಜ್ಯಗಳ ಪರಿಕಲ್ಪನೆಯೊಂದಿಗೆ ಮೊಳಕೆಯೊಡೆದ ರಾಷ್ಟ್ರನಿರ್ಮಾಣ ಪ್ರಕ್ರಿಯೆಯು 1648ರಲ್ಲಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆದ **'ವೆಸ್ಟ್ ಫಾಲಿಯ'** ಒಪ್ಪಂದದ ನಂತರ ಉಗಮವಾಯಿತು. ಆದರೆ ನಮ್ಮ ಭಾರತದಲ್ಲಿ ಸ್ವಾತಂತ್ರ್ಯ ಪಡೆಯುವುದರ ಜೊತೆ ಜೊತೆಯಲ್ಲಿಯೇ ಪ್ರಾರಂಭವಾಯಿತು.

ಈ ರಾಷ್ಟ್ರನಿರ್ಮಾಣದ ಅಗತ್ಯಾಂಶಗಳು ಕೆಳಗಿನಂತಿವೆ.

1. ಜನತೆಯ ಬೆಂಬಲ
2. ಉತ್ತಮ ಆಡಳಿತ
3. ದಕ್ಷನಾಯಕತ್ವ
4. ರಾಜಕೀಯ ಸಂಸ್ಕೃತಿ
5. ಅಧಿಕಾರ ಹಂಚಿಕೆ
6. ಸಾರ್ವತ್ರಿಕ ಶಿಕ್ಷಣ
7. ರಾಷ್ಟ್ರೀಯ ಗುಣ
8. ರಾಷ್ಟ್ರೀಯ ಸಮಗ್ರತೆ
9. ಜವಾಬ್ದಾರಿಯುತ ಸಮೂಹ ಮಾಧ್ಯಮಗಳು
10. ಜವಾಬ್ದಾರಿಯುತ ಬೌದ್ಧಿಕತೆ

**ತೊಡಕುಗಳು;–**

1. ಬಡತನ
2. ಜನಸಂಖ್ಯಾ ಸ್ಫೋಟ
3. ಪ್ರಾದೇಶಿಕ ಅಸಮತೋಲನ
4. ಸಾಮಾಜಿಕ ಮತ್ತು ರಾಜಕೀಯ ಕ್ಷೋಭೆ
5. ರಾಜಕೀಯ ಬಿಕ್ಕಟ್ಟು

**ಪರಿಹಾರಗಳು;–**

1. ರಾಜಕೀಯ ಸ್ಥಿರತೆ
2. ಆದ್ಯತೆಗಳ ಆಯ್ಕೆ
3. ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ
4. ಮಿಶ್ರ ಆರ್ಥಿಕತೆ
5. ರಾಜ್ಯನಿರ್ದೇಶಕ ತತ್ವಗಳ ಅನುಷ್ಠಾನ
6. ನಾಗರಿಕ ಸಮಾಜದ ಪಾತ್ರ

**6. ಅನಕ್ಷರತೆಗೆ ಕಾರಣಗಳೇನು?ಇದು ಹೇಗೆ ಪ್ರಜಾಪ್ರಭುತ್ವಕ್ಕೆ ಅಡ್ಡಿಯಾಗಿದೆ?**

ಯಾವುದೇ ಒಂದು ಭಾಷೆಯಲ್ಲಿ ಓದಲು ಮತ್ತು ಬರೆಯಲು ಬಾರದಿರುವ ಸ್ಥಿತಿಯೇ ಅನಕ್ಷರತೆ. ಈ ಅನಕ್ಷರತೆಗೆ ಕಾರಣಗಳೆಂದರೆ,

1. ಜನಸಂಖ್ಯಾ ಸ್ಫೋಟ
2. ಬಡತನ
3. ಸಾಮಾಜಿಕ ಹಿಂದುಳಿದಿರುವಿಕೆ
4. ಬಾಲಕಾರ್ಮಿಕ ಪದ್ಧತಿ
5. ಕಳಪೆಗುಣಮಟ್ಟದ ಶಾಲೆಗಳು

ಅನಕ್ಷರತೆಯು ಮಾನವ ಅಭಿವೃದ್ಧಿಗೆ ಒಂದು ಶಾಪವಾಗಿರುವುದರ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಒಂದು ದೊಡ್ಡ ಕಳಂಕವಾಗಿದೆ, ಹೇಗೆಂದರೆ,

1. ರಾಜಕೀಯ ಪ್ರಜ್ಞೆಯ ಕೊರತೆ
2. ಕಡಿಮೆ ಪ್ರಮಾಣದ ಮತದಾನ
3. ಹಣ ಮತ್ತು ತೋಳ್ಬಲ
4. ಜನಪ್ರಿಯ ರಾಜಕಾರಣ
5. ಸರ್ವಾಧಿಕಾರತ್ವದ ಉಗಮ.

**7. ಜಾಗತೀಕರಣ ಅರ್ಥ, ಪ್ರಾಮುಖ್ಯತೆ ಮತ್ತು ರಾಜಕೀಯ ಪರಿಣಾಮಗಳನ್ನು ವಿವರಿಸಿ.**

ವಿಶ್ವದ ಆರ್ಥಿಕತೆಯೊಂದಿಗೆ ರಾಷ್ಟ್ರದ ಆರ್ಥಿಕತೆಯನ್ನು ಒಂದುಗೂಡಿಸುವ ಪ್ರಕ್ರಿಯೆಯೇ ಜಾಗತೀಕರಣ. ಭೌಗೋಳಿಕ ನೆಲೆಗಟ್ಟನ್ನು ದಾಟಿ ಜನರು ಇಲ್ಲಿ ಪರಸ್ಪರ ಅವಲಂಭಿತರಾಗಿರುತ್ತಾರೆ. ಒಂದುಗೂಡುವಿಕೆ ಜಾಗತೀಕರಣದ ಪ್ರಮುಖ ಧ್ಯೇಯವಾಗಿದ್ದು, ರಾಷ್ಟ್ರ ರಾಷ್ಟ್ರಗಳ ನಡುವೆ ವ್ಯಾಪಾರ ಮತ್ತು ಬಂಡವಾಳ ಹೂಡಿಕೆಯ ಪ್ರಕ್ರಿಯೆಯಾಗಿದೆ. ಇದು 1991ರ ಹೊಸ ಆರ್ಥಿಕ ನೀತಿಯ ಒಂದು ಪ್ರಮುಖ ತತ್ವವಾಗಿದೆ.

**ಪ್ರಾಮುಖ್ಯತೆಗಳು;–**

1. ಸಾಮರ್ಥ್ಯ
2. ಉನ್ನತಿಗೊಂಡ ತಂತ್ರಜ್ಞಾನದ ಬಳಕೆ
3. ಜಾಗತಿಕ ಗ್ರಾಮ
4. ಉದ್ಯೋಗಿಗಳ ಮುಕ್ತ ಸಂಚಾರ
5. ವಿಶ್ವ ಸ್ಪರ್ಧೆಗೆ ಅವಕಾಶ
6. ಹೊರಗುತ್ತಿಗೆ
7. ಮಾನವ ಸಂಪನ್ಮೂಲ ಬಳಕೆ

**ರಾಜಕೀಯ ಪರಿಣಾಮಗಳು;–**

1. ಶಕ್ತಿ ರಾಷ್ಟ್ರಗಳ ಒತ್ತಡ
2. ಪರಮಾಧಿಕಾರಕ್ಕೆ ಧಕ್ಕೆ
3. ಸಾಂಸ್ಕೃತಿಕ ದಾಳಿ
4. ಜೀವನ ಶೈಲಿಗೆ ಗುಲಾಮರಾಗುತ್ತಾರೆ
5. ಸಾಲಮನ್ನಾ ರದ್ದುಗೊಳಿಸುವುದು
6. ರಾಜಕೀಯ ಅಸ್ಥಿರತೆ
7. ಸಮೂಹ ಮಾಧ್ಯಮಗಳ ಮೇಲೆ ನಿಯಂತ್ರಣ.

**8. ಅಂತರರಾಷ್ಟ್ರೀಯ ಸಂಬಂಧಗಳ ಪರಿಕಲ್ಪನೆಗಳನ್ನು ವಿವರಿಸಿ.**

ಪರಮಾಧಿಕಾರ ಪಡೆದ ಸ್ವತಂತ್ರ ರಾಜ್ಯಗಳ ನಡುವಣ ಸಂಬಂಧವೇ ಅಂತರರಾಷ್ಟ್ರೀಯ ಸಂಬಂಧ. ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ವಿಷಯಗಳೇ ಅಂತರರಾಷ್ಟ್ರೀಯ ಸಂಬಂಧಗಳ ಪರಿಕಲ್ಪನೆಯಾಗಿವೆ. ಅವುಗಳೆಂದರೆ,

1. ರಾಜ್ಯದ ಪರಮಾಧಿಕಾರ
2. ರಾಷ್ಟ್ರೀಯ ಶಕ್ತಿ
3. ಶಕ್ತಿ ಬಣಗಳು
4. ಶಕ್ತಿ ಸಮತೋಲನ
5. ರಾಷ್ಟ್ರೀಯ ಹಿತಾಶಕ್ತಿ
6. ರಾಷ್ಟ್ರಾಧಿಪತ್ಯ.

**9. ಭಾರತದ ವಿದೇಶಾಂಗನೀತಿಯ ಮೂಲ ತತ್ವಗಳನ್ನು ವಿವರಿಸಿ.**

ಒಂದು ಸ್ವತಂತ್ರ ರಾಷ್ಟ್ರ ಮತ್ತೊಂದು ಸ್ವತಂತ್ರ ರಾಷ್ಟ್ರದೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿಯೇ ವಿದೇಶಾಂಗ ನೀತಿ. **ನಮ್ಮ ಭಾರತದ ವಿದೇಶಾಂಗ ನೀತಿಯ ಶಿಲ್ಪಿ ಪಂಡಿತ್ ಜವಾಹರ್‌ಲಾಲ್ ನೆಹರು.** ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳೆಂದರೆ,

1. ಅಲಿಪ್ತ ನೀತಿ
2. ಸಾಮ್ರಾಜ್ಯಶಾಹಿನೀತಿ ಮತ್ತು ವಸಾಹತುಶಾಹಿಗೆ ವಿರುದ್ಧ
3. ವಿಶ್ವಸಂಸ್ಥೆಯಲ್ಲಿ ನಂಬಿಕೆ
4. ಗುರಿ ಮತ್ತು ಮಾರ್ಗ
5. ವರ್ಣ ಮತ್ತು ಜನಾಂಗೀಯ ತಾರತಮ್ಯಕ್ಕೆ ವಿರೋಧ
6. ಪಂಚಶೀಲ ತತ್ವ
7. ಕಾಮನ್‌ವೆಲ್ತ್ ರಾಷ್ಟ್ರಗಳೊಂದಿಗೆ ಒಪ್ಪಂದ
8. ನಿಶ್ಯಸ್ತ್ರೀಕರಣ
9. ವಿಭಜಿತ ರಾಷ್ಟ್ರಗಳ ಬಗ್ಗೆ ಅನುಕಂಪ
10. ಚಿಕ್ಕ ರಾಷ್ಟ್ರಗಳ ಬಗ್ಗೆ ಒಲವು
11. ಆಫ್ರಿಕಾ-ಏಷ್ಯಾದ ರಾಷ್ಟ್ರಗಳ ಬಗ್ಗೆ ವಿಶೇಷ ಆಸಕ್ತಿ
12. ಶೀತಲಸಮರಕ್ಕೆ ವಿರುದ್ಧ

ನಮ್ಮ ಭಾರತದ ವಿದೇಶಾಂಗ ನೀತಿಯಲ್ಲಿ ಅನೇಕ ಬದಲಾವಣೆಗಳಾಗಿದ್ದರೂ ಕೂಡ ಈ ಮೇಲಿನ ಮೂಲ ತತ್ವಗಳು ಹಾಗೆಯೇ ಉಳಿದುಕೊಂಡಿವೆ.

**10. ಕೋಮುವಾದದ ಕಾರಣಗಳನ್ನು ತಿಳಿಸಿ. ಹಾಗೂ ಅವುಗಳ ನಿವಾರಣೋಪಾಯಗಳನ್ನು ಕುರಿತು ಬರೆಯಿರಿ.**

ಒಂದು ಧರ್ಮದ ಜನರು ತಮ್ಮ ಧರ್ಮದ ಬಗ್ಗೆ ಅತಿಯಾದ ವ್ಯಾಮೋಹವನ್ನು ಹೊಂದಿದ್ದು ಇತರೆ ಧರ್ಮದ ಬಗ್ಗೆ ಕೀಳರಿಮೆ ಹೊಂದಿರುವುದೇ ಕೋಮುವಾದ. ಇದಕ್ಕೆ ಕಾರಣಗಳೆಂದರೆ,

1. ಭಾರತದಲ್ಲಿ ಬ್ರಿಟೀಷರ ನೀತಿ
2. ಹಿಂದೂ-ಮುಸ್ಲಿಂ ರಾಷ್ಟ್ರೀಯವಾದ
3. ಕೋಮು ಗಲಭೆಗಳು
4. ರಾಜಕೀಯ ಪ್ರೇರಿತ
5. ಧಾರ್ಮಿಕ ಸಂಘಟನೆಗಳು.

ಈ ಕೋಮುವಾದದ ನಿವಾರಣೋಪಾಯಗಳೆಂದರೆ,

1. ಜಾತ್ಯಾತೀತತೆ
2. ರಾಷ್ಟ್ರೀಯ ಭಾವೈಕ್ಯತೆ
3. ನೆರೆಹೊರೆಯ ಶಾಂತಿ ಸಮಿತಿಗಳು

**11. ಭಾರತ ಮತ್ತು ಅಮೇರಿಕಾದ ನಡುವಿನ ಸಂಬಂಧವನ್ನು ಕುರಿತು ವಿವರಿಸಿ.**

ಭಾರತವು ಶಾಂತಿಪ್ರಿಯ ರಾಷ್ಟ್ರವಾಗಿರುವುದರಿಂದ, ವಿಶ್ವದ ಎಲ್ಲಾ ರಾಷ್ಟ್ರಗಳೊಡನೆ, ಉತ್ತಮ ಸಂಬಂಧವನ್ನು ಹೊಂದಲು ಹಂಬಲಿಸುತ್ತದೆ. ಈ ನಿಟ್ಟಿನಲ್ಲಿ ವಿಶ್ವದ ಎರಡು ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿರುವ ಭಾರತ ಮತ್ತು ಅಮೇರಿಕಾ ನಡುವಣ ಸಂಬಂಧವು ಬ್ರಿಟಿಷ್ ಸಾಮ್ರಾಜ್ಯ ಶಾಹಿಯಷ್ಟೇ ಹಳೆಯದಾಗಿದ್ದು, ಆ ಸಂಬಂಧವನ್ನು ಈ ಕೆಳಗಿನಂತೆ ಕಾಣಬಹುದಾಗಿದೆ.

1. ಆರ್ಥಿಕ ಸಂಬಂಧಗಳು
2. ಮಿಲಿಟರಿ ಸಂಬಂಧಗಳು
3. ಅಣು ಒಪ್ಪಂದ
4. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧಗಳು

ಉಭಯ ರಾಷ್ಟ್ರಗಳ ನಾಯಕರ ಇತ್ತೀಚಿನ ಭೇಟಿಯು ಈ ರಾಷ್ಟ್ರಗಳ ನಡುವಣ ಸಂಬಂಧವನ್ನು ಉತ್ತಮಗೊಳಿಸಲು ಸಹಕಾರಿಯಾಗಿದೆ. ಭಾರತದ ಈಗಿನ ಪ್ರಧಾನಿ ನರೇಂದ್ರಮೋದಿರವರು ತಮ್ಮ ಅಧಿಕಾರಾವಧಿಯಲ್ಲಿ ಈಗಾಗಲೇ ನಾಲ್ಕು ಭಾರಿ ಅಮೇರಿಕಾಗೆ ಭೇಟಿ ನೀಡುವುದರ ಮೂಲಕ ಭಾರತ ಮತ್ತು ಅಮೇರಿಕಾ ನಡುವಣ ಸಂಬಂಧ ಉತ್ತಮಗೊಳ್ಳಲು ಪ್ರಯತ್ನಿಸಿದ್ದಾರೆ.

## V. ಐದು ಅಂಕದ ಪ್ರಶ್ನೆಗಳು
**(ಕೆಳಗಿನ ಪ್ರಶ್ನೆಗಳಿಗೆ 15-20 ವಾಕ್ಯಗಳಲ್ಲಿ ಉತ್ತರಿಸಿ)**

**1. ಭಾರತದ ಯಾವುದಾದರು ಒಬ್ಬ ರಾಜಕೀಯ ನಾಯಕನನ್ನು ಕುರಿತು ಬರೆಯಿರಿ.**

**ನರೇಂದ್ರ ಮೋದಿ :-** ಇವರು ನಮ್ಮ ದೇಶದಲ್ಲಿ ಪ್ರಸ್ತುತ ಎರಡನೇ ಬಾರಿ ಪ್ರಧಾನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನರೇಂದ್ರ ಮೋದಿರವರು ಇದಕ್ಕೂ ಮೊದಲು ಗುಜರಾತ್‌ನಲ್ಲಿ 12 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸುವುದರ ಮೂಲಕ ಭಾರತದ ಒಬ್ಬ ಉತ್ತಮ ಮುಖ್ಯಮಂತ್ರಿ ಎಂಬ ಗೌರವಕ್ಕೆ ಪಾತ್ರರಾಗಿದ್ದರು.ಇವರ ನಾಯಕತ್ವದ ಬಿ.ಜೆ.ಪಿ. ಸರ್ಕಾರವು ಅನೇಕ ಜನಪರ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ. ಅಂತಹ ಯೋಜನೆಗಳೆಂದರೆ,

* ಸ್ವಚ್ಛಭಾರತ್ ಯೋಜನೆ
* ಸುಕನ್ಯಾ ಯೋಜನೆ
* ಭೇಟಿ ಪಡಾವೋ ಭೇಟಿ ಬಚಾವೋ ಯೋಜನೆ
* ಜನ್‌ಧನ್ ಯೋಜನೆ
* ಜಿ.ಎಸ್.ಟಿ.ಜಾರಿ

* ನೋಟಿನ ಅಮಾನ್ಯೀಕರಣ (ದಿನಾಂಕ: 08.11.2016)
* ತ್ರಿವಳಿ ತಲ್ಲಾಕ್ ರದ್ದು ಕಾಯ್ದೆ
* ಮೇಕ್ ಇನ್ ಇಂಡಿಯಾ
* ಡಿಜಿಟಲ್ ಇಂಡಿಯಾ
* ಮುದ್ರಾ ಬ್ಯಾಂಕ್ ಯೋಜನೆ
* ಅಟಲ್ ಪೆನ್ಷನ್ ಸ್ಕೀಂ
* ಜನೌಷಧಿ ಕೇಂದ್ರ ಸ್ಥಾಪನೆ
* ಉಜ್ವಲ ಯೋಜನೆ
* ಜಮ್ಮು ಮತ್ತು ಕಾಶ್ಮೀರ ವಿಭಜನೆ ಕಾಯ್ದೆ (370ನೇ ವಿಧಿ ರದ್ಧತಿ)

ಈ ರೀತಿ ಇನ್ನೂ ಅನೇಕ ಜನಪರ ಯೋಜನೆಗಳ ಮೂಲಕ ನರೇಂದ್ರ ಮೋದಿಯು ಮಹಿಳೆಯರ, ಯುವಜನರ, ದುರ್ಬಲರ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಹಾಗೆಯೇ ಇವರು ಜಾಗತಿಕ ಮಟ್ಟದಲ್ಲಿ ಅನೇಕ ರಾಷ್ಟ್ರಗಳ ನಡುವೆ ಉತ್ತಮ ಬಾಂಧವ್ಯಕ್ಕಾಗಿ ಶ್ರಮಿಸುವುದರ ಮೂಲಕ ವಿಶ್ವದ ಎಲ್ಲಾ ರಾಷ್ಟ್ರಗಳು ಭಾರತದತ್ತ ತಿರುಗಿ ನೋಡುವಂತೆ ಮಾಡಿ ಭಾರತದ ಸ್ನೇಹಕ್ಕಾಗಿ ಹಾತೊರೆಯುವಂತೆ ಮಾಡಿದ್ದಾರೆ. ಒಟ್ಟಾರೆ ಭಾರತದ ಆಶಾಕಿರಣವಾಗಿದ್ದಾರೆ.

**2. ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಗಣರಾಜ್ಯೋತ್ಸವದ ದಿನಾಚರಣೆಯನ್ನು ಕುರಿತು ಬರೆಯಿರಿ.**

ದಿನಾಂಕ: 26.01.2019 ರಂದು ಪ್ರತೀ ವರ್ಷದಂತೆ ಈ ವರ್ಷವೂ ಕೂಡ ನಮ್ಮ ಕಾಲೇಜಿನಲ್ಲಿ ರಾಷ್ಟ್ರೀಯ ಹಬ್ಬವಾದ ಗಣರಾಜ್ಯೋತ್ಸವ ದಿನಾಚರಣೆಯನ್ನು ಅತ್ಯಂತ ಸಂಭ್ರಮ ಮತ್ತು ಸಡಗರದಿಂದ ಆಚರಿಸಿದೆವು. ಈ ಆಚರಣೆಯ ಪೂರ್ವತಯಾರಿಯನ್ನು ನಮ್ಮ ಕಾಲೇಜಿನ ಎನ್.ಎಸ್.ಎಸ್., ಸ್ಕೌಟ್ ಮತ್ತು ಎನ್.ಸಿ.ಸಿ. ವಿದ್ಯಾರ್ಥಿಗಳೆಲ್ಲಾ ಸೇರಿ ಹಿಂದಿನ ದಿನವೇ ಮಾಡಿಕೊಂಡಿದ್ದೆವು. ಹಾಗಾಗಿ ಕಾರ್ಯಕ್ರಮದ ದಿನ ಬೆಳಗ್ಗೆ 7.30ಕ್ಕೆ ಸರಿಯಾಗಿ ಪ್ರಾಂಶುಪಾಲರು, ಉಪನ್ಯಾಸಕರು, ಮುಖ್ಯ ಅತಿಥಿಗಳು ಮತ್ತು ನಮ್ಮ ವಿದ್ಯಾರ್ಥಿ ಮಿತ್ರರೆಲ್ಲಾ ಬಂದಾಕ್ಷಣ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳಿಂದ ಧ್ವಜರೋಹಣದೊಂದಿಗೆ ಆರಂಭಿಸಿದೆವು. ಪ್ರಾರ್ಥನೆಯೊಂದಿಗೆ ಸಮಾರಂಭದ ಗಣ್ಯರನ್ನು ನಮ್ಮ ಗುರುಗಳಾದ ಉಪನ್ಯಾಸಕರು ಸ್ವಾಗತಿಸಿದರು. ನಂತರ ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಗಣರಾಜ್ಯೋತ್ಸವವನ್ನು ನಾವು 1950 ಜವನರಿ 26 ರಿಂದ ಆಚರಿಸಿಕೊಂಡು ಬರುತ್ತಿದ್ದೇವೆ. ಕಾರಣ ಆ ದಿನ ವಿಶ್ವದಲ್ಲೇ ಅತ್ಯಂತ ದೊಡ್ಡದಾದ ನಮ್ಮ ಸಂವಿಧಾನವು ಜಾರಿಗೆ ಬಂದ ದಿನ ಹಾಗಾಗಿ ಈ ದಿನವನ್ನು ನಾವು ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತಿದ್ದೇವೆ ಎಂದರು. ಈ ಸಂವಿಧಾನದ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್. ಇವರನ್ನು ನಾವು ಈ ದಿನ ಸ್ಮರಿಸುತ್ತಾ, ಸಂವಿಧಾನದ ಆಶಯಗಳನ್ನು ಜಾರಿಗೆ ತರುವ ಪ್ರಯತ್ನವನ್ನು ನಾವೆಲ್ಲರೂ ಮಾಡೋಣ ಎಂದು ಹೇಳುವುದರೊಂದಿಗೆ ನಮ್ಮ ಸಂವಿಧಾನದ ಶ್ರೇಷ್ಠತೆ ಮತ್ತು ಮೌಲ್ಯಗಳನ್ನು ಸವಿಸ್ತಾರವಾಗಿ ತಿಳಿಸಿಕೊಟ್ಟರು. ನಂತರ ನಮ್ಮ ಕಾಲೇಜಿನ ಪ್ರಾಂಶುಪಾಲರು ಅಧ್ಯಕ್ಷೀಯ ಭಾಷಣ ಮಾಡಿದರು. ಆ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಕೊನೆಯದಾಗಿ ವಂದನಾರ್ಪಣೆ –ಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಇಂತಹ ಕಾರ್ಯಕ್ರಮಗಳಿಗೆ ಅರ್ಥ ಬರಬೇಕಾದರೆ ಸಂವಿಧಾನದ ಆಶಯಗಳು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬರಬೇಕು.

**3. ಪ್ರಸ್ತುತ ಭಾರತದಲ್ಲಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪಟ್ಟಿ ಮಾಡಿ.**

ಪ್ರಸ್ತುತ ನಮ್ಮ ಭಾರತವು ಈ ಕೆಳಗಿನ 28 ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳನ್ನು ಹೊಂದಿದೆ. ಅವುಗಳೆಂದರೆ

***ರಾಜ್ಯಗಳು***

| | |
|---|---|
| 1. ಅರುಣಾಚಲ ಪ್ರದೇಶ | 2. ಆಂದ್ರಪ್ರದೇಶ |
| 3. ಅಸ್ಸಾಂ | 4. ಬಿಹಾರ |
| 5. ಛತ್ತೀಸ್‌ಗಢ್ | 6. ಗೋವಾ |
| 7. ಗುಜರಾತ್ | 8. ಹರಿಯಾಣ |
| 9. ಹಿಮಾಚಲ ಪ್ರದೇಶ | 10. ಜಾರ್ಕಂಡ್ |
| 11. ಕರ್ನಾಟಕ | 12. ಕೇರಳ |
| 13. ಮಧ್ಯಪ್ರದೇಶ | 14. ಮಹಾರಾಷ್ಟ್ರ |
| 15. ಮಣಿಪುರ | 16. ಮೇಘಾಲಯ |
| 17. ಮಿಜೋರಾಂ | 18. ನಾಗಾಲ್ಯಾಂಡ್ |
| 19. ಒರಿಸ್ಸಾ | 20. ಪಂಜಾಬ್ |
| 21. ಪಶ್ಚಿಮ ಬಂಗಾಳ | 22. ರಾಜಸ್ಥಾನ |
| 23. ಸಿಕ್ಕಿಂ | 24. ತಮಿಳು ನಾಡು |
| 25. ತೆಲಂಗಾಣ | 26. ತ್ರಿಪುರ |
| 27. ಉತ್ತರಪ್ರದೇಶ | 28. ಉತ್ತರಖಾಂಡ |

***ಕೇಂದ್ರಾಡಳಿತ ಪ್ರದೇಶಗಳು***

1. ಅಂಡಮಾನ್ ಮತ್ತು ನಿಕೋಬಾರ್
2. ಚಂಡೀಗಢ್
3. ದಾದ್ರ ಮತ್ತು ನಗರ ಹವೇಲಿ
4. ಡಿಯೋ ಡಾಮನ್
5. ದೆಹಲಿ
6. ಲಕ್ಷದ್ವೀಪ
7. ಪಾಂಡಿಚೇರಿ
8. ಜಮ್ಮು ಮತ್ತು ಕಾಶ್ಮೀರ
9. ಲಡಾಖ್

❑❑❑